
ಜನಪದ ಗಣಿತ

ಶಾಂತಿನಾಯಿಕ

ಒಂದು ಎಮ್ಮೆ ೪ ಸೇರು ಹಾಲು ಕೊಡುತ್ತದೆ. ಆಕಳು ಒಂದು ಸೇರು ಹಾಲು ಕೊಡುತ್ತದೆ. ಕುರಿ ಅರ್ಧ ಸೇರು ಹಾಲು ಕೊಡುತ್ತದೆ. ೨೦ ಪ್ರಾಣಿಯಿಂದ ೨೦ ಸೇರು ಹಾಲು ಪಡೆಯಲು ಪ್ರಾಣಿಗಳು ಯಾವ ಯಾವ ಸಂಖ್ಯೆಯಲ್ಲಿರಬೇಕು?

ಉತ್ತರ : ೨ ಎಮ್ಮೆ, ೬ ಆಕಲು, ೧೨ ಕುರಿ.



ಜನಪ್ರಿಯ ಜಾನಪದ ಪುಸ್ತಕ ಮಾಲೆ - ೪೦

ಜನಪದ ಗಣಿತ

ಶಾಂತಿನಾಯಕ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

JANAPADA GANITA - By **Shanthi Nayak.** Pulished by **Karnataka Janapada Parishath,** No. 1, Jaladarshini Layout, Near M. S. Ramaiah Hospital Gate, New BEL Road, Bengaluru-560 054.

ಪ್ರಥಮ ಮುದ್ರಣ : ೨೦೦೯ ಪುಟಗಳು : ೩೨

ಪ್ರತಿಗಳು : ೨೦೦೦

ಬೆಲೆ : **ರೂ. ೧೦** (ಹತ್ತು ರೂಪಾಯಿ)

ಗ್ರಂಥ ಪ್ರಕಟಣಾ ಸಲಹಾ ಸಮಿತಿ

ಮುದ್ರಕರು :

ಚಂದನ ಪ್ರಿಂಟರ್ಸ್
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦.
ದೂರವಾಣಿ : ೨೬೬೯೬೨೬೮

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜನಪ್ರಿಯ ಜಾನಪದ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ–ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಪ್ರಸಿದ್ಧ ಲೇಖಕಿಯಾದ ಶ್ರೀಮತಿ **ಶಾಂತಿನಾಯಕ** ಅವರು **'ಜನಪದ ಗಣಿತ'** ಎಂಬ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೩೦–೧೧–೨೦೦೯

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ನೆನಕೆ

ಈ ಚಿಕ್ಕಪುಸ್ತಕದಲ್ಲಿಯ ಜನಪದ ಗಣಿತಗಳು ೧೯೭೧-೭೨ರ ಹೊತ್ತಿಗೆ ಸಂಗ್ರಹಗೊಂಡವುಗಳಾಗಿವೆ. ಕಳೆದ ವರ್ಷ ಇವುಗಳಲ್ಲಿಯ ಒಂದು ಜನಪದ ಗಣಿತವನ್ನು ನನ್ನ ಮೊಮ್ಮಗಳು ಸೃಷ್ಟಿಗೆ ದೂರವಾಣಿ ಮೂಲಕ ಹೇಳಿದೆ. ಅವಳು ಈ ಗಣಿತವನ್ನು ತನ್ನ ಹಲವು ಗೆಳತಿಯರ ಮುಂದಿಟ್ಟಳು . ಅವರಿಗೆ ಈ ಗಣಿತದ ಉತ್ತರ ಹೊಳೆಯಲಿಲ್ಲ. ಬಳಿಕ ಈ ಗಣಿತಕ್ಕೆ ಉತ್ತರ ಪಡೆಯುವ ಗುಟ್ಟನ್ನು ಸೃಷ್ಟಿಗೆ ಅವಳ ತಂದೆ ತಿಳಿಸಿಕೊಟ್ಟರು. ಆಗ ಅವಳು ಕುತೂಹಲದಿಂದ ಕಾಯುತ್ತಿದ್ದ ತನ್ನ ಗೆಳತಿಯರಿಗೆ ತಾನು ಬಿಡಿಸಲು ಕೊಟ್ಟ ಗಣಿತದ ಉತ್ತರವನ್ನು ಹೇಳಿದಳು. ಆದರೆ ಅದನ್ನು ಬಿಡಿಸುವ ಗುಟ್ಟನ್ನು ಅವರಿಗೆ ಅವಳು ತಿಳಿಸಲಿಲ್ಲ. ಗೆಳತಿಯರು ತಾಳೆನೋಡಿ ಉತ್ತರವನ್ನು ಒಪ್ಪಿಕೊಂಡರು. ಸೃಷ್ಟಿಯ ಗಣಿತ ಜ್ಞಾನಕ್ಕೆ ವಿಸ್ಮಯಗೊಂಡರು. ಇನ್ನಷ್ಟು ಇಂತಹ ಗಣಿತ ಬಿಡಿಸಲು ಅವರು ಆತುರಪಟ್ಟರು. ಈ ಘಟನೆ ನನ್ನ ಹಳೆಯ ಸಂಗ್ರಹದಲ್ಲಿರುವ ಈ ಕೆಲವು ಗಣಿತಗಳನ್ನು ಪ್ರಕಟಿಸಲು ಪ್ರೇರಣೆ ನೀಡಿತು.

ಬೆಳೆಯುವ ಮಕ್ಕಳ ಬುದ್ಧಿಶಕ್ತಿಗೆ ಆತ್ಮೀಯ ಸವಾಲಾಗುವ ಈ ಜನಪದ ಗಣಿತಗಳು ಅವರಲ್ಲಿ ಗಣಿತದ ಬಗ್ಗೆ ಆಸಕ್ತಿಯನ್ನೂ ಕುತೂಹಲವನ್ನೂ ವಿಸ್ಮಯವನ್ನೂ ಉಂಟುಮಾಡಬಲ್ಲವು. ಹಿರಿ ಕಿರಿಯರಿಗೆ ಮನೋರಂಜನೆ ನೀಡಬಲ್ಲವು. ಶಾಲಾಮಕ್ಕಳು ತಾವು ಶಾಲೆಯಲ್ಲಿ ಕಲಿಯತ್ತಿರುವ ಗಣಿತದ ಬಗ್ಗೆ ಆಸಕ್ತರಾಗಿ ಆ ಬಗ್ಗೆ ಕ್ರೀಡಾಭಾವನೆ ಬೆಳೆಸಿಕೊಳ್ಳಲು ಈ ಬಗೆಯ ಗಣಿತಗಳು ನೆರವಾಗುತ್ತವೆ.

ಇಲ್ಲಿಯ ಗಣಿತಗಳ ಉತ್ತರಗಳನ್ನು ಪರಿಗಣಿಸಿ ಗಣಿತಗಳನ್ನು ಅಂಕಾತ್ಮಕ, ಶಬ್ದಾತ್ಮಕ, ಕ್ರಿಯಾತ್ಮಕ ಮತ್ತು ರೇಖಾತ್ಮಕ ಎಂಬ ಗುಂಪುಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಉಪಗುಂಪುಗಳಲ್ಲಿಯ ಗಣಿತಗಳಲ್ಲಿ ಹಲವು ವಿಧದ ಸಮಾನಾಂಶಗಳನ್ನು ಓದುಗರು ಗಮನಿಸಬಹುದು.

ಈ ಕಿರುಪುಸ್ತಕದಲ್ಲಿ ಗಣಿತದ ಉತ್ತರಗಳು ಪ್ರಶ್ನೆಗಳ ಸಮೀಪದಲ್ಲಿಯೇ ಇರುವದರಿಂದ ಓದುಗರಿಗೆ ಈ ಗಣಿತ ಸಮಸ್ಯೆಯು ಸಮಸ್ಯೆಯಾಗುಳಿಯದೆ ರಂಜನೀಯ ಆಟವಾಗಿ ಮಾರ್ಪಡುತ್ತದೆ. ಓದುಗರು ಉತ್ತರವನ್ನು ಪ್ರಶ್ನೆಯ ಜೊತೆ ತಾಳೆಹಾಕಿ, ಮನನ ಮಾಡಿಕೊಂಡು ಇತರರಿಗೆ ಸವಾಲೆಸೆಯಲು ಅನುಕೂಲವಾಗುತ್ತದೆ.

ಬಹು ಜನರಿಗೆ ಮುಟ್ಟಬಲ್ಲ ಸುಲಭ ಬೆಲೆಯ ಈ ಕಿರುಪುಸ್ತಕ ಯೋಜನೆಯ ಲಾಭವು ಶಾಲಾಮಕ್ಕಳಿಗೆ ಹಾಗೂ ಆಸಕ್ತರಿಗೆ ಮುಟ್ಟಲಿಯೆಂದು ಹಾರೈಸುತ್ತ ಈ ಕಿರು ಪುಸ್ತಕ ಪ್ರಕಟಣೆಗೆ ಕಾರಣವಾದ ಕರ್ನಾಟಕ ಜಾನಪದ ಪರಿಷತ್ತಿಗೆ ನನ್ನ ನನ್ನಿಗಳನ್ನು ಅರ್ಪಿಸುತ್ತೇನೆ.

ಹೊನ್ನಾವರ

ಶಾಂತಿನಾಯಕ

೧. ಅಂಕಾತ್ಮಕ ಗಣಿತ

೧.೧. ಅಷ್ಟಷ್ಟೇ

1. ಒಂದು ಎಮ್ಮೆ 4 ಸೇರು ಹಾಲು ಕೊಡುತ್ತದೆ. ಆಕಳು ಒಂದು ಸೇರು ಹಾಲು ಕೊಡುತ್ತದೆ. ಕುರಿ ಅರ್ಧ ಸೇರು ಹಾಲು ಕೊಡುತ್ತದೆ. 20 ಪ್ರಾಣಿಯಿಂದ 20 ಸೇರು ಹಾಲು ಪಡೆಯಲು ಪ್ರಾಣಿಗಳು ಯಾವ ಯಾವ ಸಂಖ್ಯೆಯಲ್ಲಿರಬೇಕು?

   ಉತ್ತರ: 2 ಎಮ್ಮೆ, 6 ಆಕಳು, 12 ಕುರಿ.

2. ಒಂದು ಎಮ್ಮೆ 3 ಸೇರು ಹಾಲು ಕೊಡುತ್ತದೆ. ಒಂದು ಆಕಳು ಅರ್ಧಸೇರು ಹಾಲು ಕೊಡುತ್ತದೆ. ಒಂದು ಕುರಿ ಪಾವುಸೇರು ಹಾಲು ಕೊಡುತ್ತದೆ. ನನಗೆ 20 ಪ್ರಾಣಿಗಳಿಂದ 20 ಸೇರು ಹಾಲು ಬೇಕಾಗಿದೆ. ಹಾಗಾದರೆ ಯಾವ ಯಾವ ಪ್ರಾಣಿಗಳಿಂದ ಎಷ್ಟೆಷ್ಟು ಹಾಲು ಕೊಳ್ಳಬೇಕು?

   ಉತ್ತರ: 5 ಎಮ್ಮೆ–15 ಸೇರು, 10 ಕುರಿ–2 1/2 ಸೇರು ಹಾಲು, 5 ಆಕಳು–2 1/2 ಸೇರು ಹಾಲು.

3. 50 ಪೈಸೆಗೆ ಒಂದು ತಟ್ಟೆ. 5 ರೂಪಾಯಿಗೆ ಒಂದು ಕೊಡ. 10 ರೂಪಾಯಿಗೆ ಒಂದು ಹಂಡೆ. ಈ ದರದಲ್ಲಿ ನೂರು ರೂಪಾಯಿಗೆ ನೂರು ವಸ್ತುಗಳನ್ನು ಕೊಳ್ಳಿರಿ.

   ಉತ್ತರ: 90 ತಟ್ಟೆಗಳಿಗೆ 45 ರೂಪಾಯಿ, 9 ಕೊಡಗಳಿಗೆ 45 ರೂಪಾಯಿ. 1 ಹಂಡೆಗೆ 10 ರೂಪಾಯಿ.

4. ಒಂದು ಊರಿನಲ್ಲಿ ಒಬ್ಬ ಸಾವುಕಾರನಿದ್ದನು. ಅವನು ತನ್ನ ಸ್ನೇಹಿತರ ಹತ್ತಿರ ಒಂದು ಸಮಸ್ಯೆಯಿತ್ತನು. ನಾನು ನೂರು ರೂಪಾಯಿ ಕೊಡುತ್ತೇನೆ. ಈ ನೂರು ರೂಪಾಯಿ ಖರ್ಚುಮಾಡಿ ನೂರು ಪ್ರಾಣಿಗಳನ್ನು ತರಬೇಕು. ಆ ಪ್ರಾಣಿಗಳು ಹಾಗೂ ಅವುಗಳ ದರ ಈ ರೀತಿಯಾಗಿದೆ. ಆನೆಗೆ 5 ರೂ. ಕುದುರೆಗೆ 2 ರೂ. ಕತ್ತೆಗೆ 4 ಆಣೆ.

ಉತ್ತರ: ಆನೆ 11–ರೂ 55, ಕುದುರೆ 13–ರೂ 26, ಕತ್ತೆ 76–ರೂ 19.

5. 5 ರೂಪಾಯಿಗೆ ಒಂದು ಹಂಡೆ, 1 ರೂಪಾಯಿಗೆ ಒಂದು ಕೊಡ, 2 ರೂಪಾಯಿಗೆ ಚರಗೆ, 1 ರೂಪಾಯಿಗೆ 5 ಚಂಬುಗಳಂತೆ, 100ರೂಪಾಯಿಗೆ 100 ಸಾಮಾನು ಕೊಳ್ಳಿರಿ.

ಉತ್ತರ: 9 ಹಂಡೆ–ರೂ 45, 1 ಕೊಡ–ರೂ 1, 20 ಚರಿಗೆ–ರೂ 40, 70 ಚಂಬು–ರೂ 14.

6. ಒಂದು ಎಮ್ಮೆ ಒಂದು ಚಂಬು ಹಾಲನ್ನು ಕರೆಯುತ್ತದೆ. ಒಂದು ಕುರಿ ಮೂರು ಪಾವನ್ನು, ಒಂದು ಒಂಟೆ 1 ಸೇರನ್ನು ಕರೆಯುತ್ತದೆ. 20 ಪ್ರಾಣಿಗಳಿಂದ 20 ಸೇರು ಹಾಲನ್ನು ದೊರಕಿಸಲು ಪ್ರಾಣಿಗಳು ಯಾವ ಸಂಖ್ಯೆಯಲ್ಲಿರಬೇಕು.?

ಉತ್ತರ: 1 ಎಮ್ಮೆ 1 ಚಂಬು ಅಂದರೆ 4 ಸೇರು, 12 ಕುರಿ 9 ಸೇರು, 7 ಒಂಟೆ 7 ಸೇರು ಹಾಲು ಕೊಡುತ್ತದೆ. ಹೀಗೆ 20 ಪ್ರಾಣಿ 20 ಸೇರು ಹಾಲು.

7. ಒಂದು ಎಮ್ಮೆ 2 ಚಂಬು ಹಾಲನ್ನು ಕೊಡುತ್ತದೆ. ಒಂದು ಕುರಿ ಒಂದು ಪಾವು ಹಾಲನ್ನು ಕೊಡುತ್ತದೆ. ಒಂದು ಆಕಳು 2 ಪಾವು ಹಾಲನ್ನು ಕೊಡುತ್ತದೆ. 11 ಪ್ರಾಣಿಗಳು 11ಸೇರು ಹಾಲನ್ನು ಕೊಡಲು ಅವು ಯಾವ ಸಂಖ್ಯೆಯಲ್ಲಿರಬೇಕು?

ಉತ್ತರ: 1 ಎಮ್ಮೆ 8 ಸೇರು, 8 ಕುರಿ 2 ಸೇರು, 2 ಆಕಳು 1 ಸೇರು, (4 ಪಾವು=1 ಸೇರು, 1 ಚಂಬು=4 ಸೇರು)

8. ಒಬ್ಬನಿಗೆ ಮೂರು ಜನ ಮಕ್ಕಳು. ಅವರ ಮನೆಯಲ್ಲಿ ಬಹಳ ಮಾವಿನಹಣ್ಣು ಇದ್ದವು. ಅಪ್ಪನು ಒಬ್ಬನಿಗೆ 50, ಇನ್ನೊಬ್ಬನಿಗೆ 30, ಮತ್ತೊಬ್ಬನಿಗೆ 10 ಹಣ್ಣುಗಳನ್ನು ಕೊಟ್ಟು ಸಂತೆಗೆ ಕಳುಹಿಸಿದನು. ಸಂತೆಗೆ ಹೋಗುವಾಗ ತಂದೆಯು ಮಕ್ಕಳಿಗೆ ಹೀಗೆ ಹೇಳಿದನು : ನೀವು ಮೂವರಲ್ಲಿ ಒಬ್ಬನು ಯಾವ ದರದಲ್ಲಿ ಹಣ್ಣು

ಮಾರುತ್ತಾನೋ ಅದೇ ದರದಲ್ಲಿ ನೀವಿಬ್ಬರು ಮಾರಬೇಕು. ಮಾರಾಟವಾದ ನಂತರ ಮೂವರಲ್ಲೂ 50 ಹಣ್ಣು ಮಾರಿದವನ ಹತ್ತಿರ ಎಷ್ಟು ಹಣ ಇರುತ್ತದೆಯೋ ಅಷ್ಟೇ ಹಣ ಪ್ರತಿಯೊಬ್ಬರಲ್ಲೂ ಇರಬೇಕು. ಯಾವ ರೀತಿ ಮಾರಿ ಸಮ ಸಮ ಹಣ ತರುತ್ತೀರಿ ನೋಡೋಣ, ಹೋಗಿ ಬನ್ನಿ ಎಂದು ಕಳಿಸಿದನು. ಅವರು ಹೇಗೆ ಮಾರಿದರು? ಎಷ್ಟೆಷ್ಟು ಹಣ ತಂದರು? ಇದನ್ನು ವಿಚಾರ ಮಾಡಿ ಹೇಳಿ.

ಉತ್ತರ: 10, 10, 10 ರೂಪಾಯಿ ತರುತ್ತಾರೆ.

ವಿವರಣೆ: ಮೊದಲು ಪ್ರತಿಯೊಬ್ಬರೂ ಒಂದು ರೂಪಾಯಿಗೆ ಏಳು ಹಣ್ಣಿನಂತೆ ಮಾರಾಟ ಮಾಡುತ್ತಾರೆ. ಈಗ ಮೊದಲನೆಯವನು ತನ್ನ 49 ಹಣ್ಣುಗಳನ್ನು ಮಾರಿದಾಗ 7 ರೂ ಗಳು ದೊರೆಯಿತು. ಒಂದು ಹಣ್ಣು ಬುಟ್ಟಿಯಲ್ಲಿ ಉಳಿಯಿತು. ಎರಡನೆಯವನು ತನ್ನ 30 ಹಣ್ಣುಗಳನ್ನು ಮಾರಾಟ ಮಾಡಿದಾಗ ಅವನಿಗೆ 4 ರೂ ಗಳು ದೊರೆಯಿತು. ಅವನ ಬುಟ್ಟಿಯಲ್ಲಿ ಎರಡು ಹಣ್ಣು ಉಳಿದವು. ಮೂರನೆಯವನು ತನ್ನ 7 ಹಣ್ಣುಗಳನ್ನು ಮಾರಾಟ ಮಾಡಿದಾಗ ಅವನಿಗೆ ಒಂದು ರೂ ದೊರೆಯಿತು. ಅವನ ಬುಟ್ಟಿಯಲ್ಲಿ 3 ಹಣ್ಣುಗಳು ಉಳಿದವು. ಎರಡನೆ ಬಾರಿಗೆ ಇವರು 3 ರೂ ಗೆ ಒಂದು ಹಣ್ಣಿನಂತೆ ಮಾರಿದರು. ಮೊದಲನೆಯವನಿಗೆ 1 ಹಣ್ಣಿಗೆ 3ರೂ. ಎರಡನೆಯವನಿಗೆ 2 ಹಣ್ಣಿಗೆ 6 ರೂ. ಮೂರನೆಯವನಿಗೆ 3 ಹಣ್ಣಿಗೆ 9ರೂ ಸಿಕ್ಕಿತು. ಹೀಗೆ ಮೊದಲನೆಯವನ ಹತ್ತಿರ 7+3=10, ಎರಡನೆಯವನ ಹತ್ತಿರ 4+6=10, ಮೂರನೆಯವನ ಹತ್ತಿರ 9+1 ರೂಪಾಯಿಗಳಿದ್ದವು. ಹೀಗೆ ಅಷ್ಟಷ್ಟೇ ಹಣ ತಂದರು.

9. ಒಂದು ದುಡ್ಡಿಗೆ 5 ಅಡಕೆಯಾಗಲೀ 25 ಎಲೆಯಾಗಲೀ 100 ಲವಂಗವಾಗಲೀ ದೊರೆಯುತ್ತದೆ. 1 ದುಡ್ಡು ಕೊಟ್ಟು ಈ ಮೂರು ವಸ್ತುಗಳನ್ನು ಸಮ ಪ್ರಮಾಣದಲ್ಲಿ ಕೊಂಡು ತನ್ನಿರಿ.

ಉತ್ತರ: ಅಡಿಕೆ 4, ಎಲೆ 4, ಲವಂಗ 4.

ವಿಧಾನ: ಒಂದು ದುಡ್ಡುಕೊಟ್ಟು 5 ಅಡಿಕೆ ಕೊಳ್ಳಬೇಕು. 1 ಅಡಿಕೆ ಕೊಟ್ಟು 5 ಎಲೆಕೊಳ್ಳಬೇಕು. 1 ಎಲೆ ಕೊಟ್ಟು 4 ಲವಂಗ ಕೊಳ್ಳಬೇಕು. ಹೀಗೆ ಒಂದು ದುಡ್ಡಿಗೆ ಅಷ್ಟಷ್ಟೇ ಸಾಮಾನು ಕೊಳ್ಳಬಹುದು.

1.2. ಹಂಚುವುದು

1. ಪ್ರತಿಯೊಬ್ಬ ಗಂಡಸರಿಗೆ ಎರಡು, ಪ್ರತಿಯೊಬ್ಬ ಹೆಂಗಸರಿಗೆ ಒಂದುವರೆ, ಪ್ರತಿಯೊಬ್ಬ ಮಕ್ಕಳಿಗೆ ಅರ್ಧ ರೊಟ್ಟಿ ಬರುವಂತೆ 20 ಜನರಿಗೆ 20 ರೊಟ್ಟಿಗಳನ್ನು ಹೆಂಗಸರು, ಗಂಡಸರು ಮಕ್ಕಳಲ್ಲಿ ಹಂಚಿರಿ.

   ಉತ್ತರ: 4 ಗಂಡಸರು=8, 4 ಹೆಂಗಸರು=6, 12 ಮಕ್ಕಳು= 6.

2. ಒಂದು ಮನೆಯಲ್ಲಿ ದಂಪತಿಗಳನ್ನು ಊಟಕ್ಕೆ ಕರೆದಿದ್ದರು. ಅವರ ಜೊತೆಯಲ್ಲಿ ಅವರ ಮಕ್ಕಳು ಬಂದಿದ್ದರು. ಎಲ್ಲರೂ ಕೂಡಿ ನೂರು ಜನರಿದ್ದರು. ಬುಟ್ಟಿಯಲ್ಲಿ ನೂರು ದೋಸೆಗಳಿದ್ದವು. ಮನೆಯ ಯಜಮಾನತಿ ದೋಸೆಗಳನ್ನು ಲೆಕ್ಕಮಾಡಿ ಗಂಡಸರಿಗೆ ತಲಾ 2 ರಂತೆ, ಹೆಂಗಸರಿಗೆ ತಲಾ 1 ರಂತೆ, ಮಕ್ಕಳಿಗೆ ತಲಾ ಅರ್ಧದಂತೆ ಹಂಚಿದರು. ಹಾಗಾದರೆ ಬಂದ ಗಂಡಸರೆಷ್ಟು? ಹೆಂಗಸರೆಷ್ಟು? ಮಕ್ಕಳೆಷ್ಟು?

   ಉತ್ತರ: 25 ಗಂಡಸರು 50 ದೋಸೆ, 25 ಹೆಂಗಸರು 25 ದೋಸೆ, 50 ಮಕ್ಕಳು 25 ದೋಸೆ.

೧. ೩. ಮನಸ್ಸಿನಲ್ಲಿಟ್ಟುಕೊಳ್ಳುವುದು.

1. ನೀವು ಒಂದು ಅಂಕೆ ಅಥವಾ ಸಂಖ್ಯೆಯನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಿರಿ. ಅಷ್ಟೇ ಮೊತ್ತವನ್ನು ಆ ಸಂಖ್ಯೆಗೆ ಕೂಡಿಸಿರಿ. ನನ್ನ 6 ನ್ನು ಅದಕ್ಕೆ ಕೂಡಿಸಿರಿ. ಅವುಗಳ ಒಟ್ಟು ಮೊತ್ತದಲ್ಲಿ ಅದರ ಅರ್ಧವನ್ನು ಕಳೆದು 2ನೇ ಸಾರಿ ಇಟ್ಟುಕೊಂಡ ಸಂಖ್ಯೆಯನ್ನು ಉಳಿದ ಮೊತ್ತದಲ್ಲಿ ಕಳೆಯಿರಿ. ಎಷ್ಟು ಉಳಿಯಿತೆಂಬುದನ್ನು ನಾನು ಹೇಳುತ್ತೇನೆ.

ಉತ್ತರ: 3 ಗುಟ್ಟು; ನಾವು ಕೊಟ್ಟ ಅಂಕೆ ಅಥವಾ ಸಂಖ್ಯೆಯ ಅರ್ಧವೇ ಉತ್ತರ. ವಿವರ: 5+5+6=16, 16–8=8, 8–5=3 ನಾವು ಕೊಟ್ಟ ಅಂಕೆಯು 6. ಆದ್ದರಿಂದ ಎದುರಾಳಿಯ ಉತ್ತರವು 6ರ ಅರ್ಧ 3.

2. ಪತ್ತರ ಒಳಗಿನ ಒಂದು ಅಂಕೆಯನ್ನು ಮನಸ್ಸಿನಲ್ಲಿಡಿರಿ. ಗೆಳೆಯನಿಂದ ಅಷ್ಟೇ ತೆಗೆದು ಕೊಳ್ಳಿರಿ. ನೀವು ಮನಸ್ಸಿನಲ್ಲಿಟ್ಟುಕೊಂಡ ಅಂಕೆಗೆ ಅದನ್ನು ಕೂಡಿಸಿರಿ. ಅದಕ್ಕೆ ನಾನು ಕೊಡುವ ಆರನ್ನು ಸೇರಿಸಿರಿ. ಈ ಸಂಖ್ಯೆಯನ್ನು ಅರ್ಧ ಮಾಡಿರಿ. ಒಂದು ಪಾಲನ್ನು ತಾಯಿಗೆ ಕೊಡಿ. ಗೆಳೆಯ ಕೊಟ್ಟದ್ದನ್ನು ಅವನಿಗೆ ಕೊಡಿರಿ. ನಾನು ಉತ್ತರ ಹೇಳುತ್ತೇನೆ.

ಉತ್ತರ: 3 ಗುಟ್ಟು; ನಾವು ಕೊಟ್ಟ ಅಂಕೆಯು ಅರ್ಧವು ಉತ್ತರವಾಗಿರುತ್ತದೆ.

ವಿವರಣೆ: 9+9=18, 18+6=24, ಇದರ ಅರ್ಧ 12, ಈ 12ನ್ನು ತಾಯಿಗೆ ಕೊಡಿ. ಗೆಳೆಯ ಕೊಟ್ಟ 9ನ್ನು ಅವನಿಗೆ ಕೊಡಿರಿ. ಈಗ ನಿಮ್ಮ ಬಳಿ 3 ಉಳಿಯಿತು. ಇಂತಹ ಗಣಿತಗಳಲ್ಲಿ ಹಲವಾರು ಪಾಠಾಂತರಗಳು ಕಂಡುಬರುತ್ತವೆ.ಈ ಗಣಿತದಲ್ಲಿ ಅಂಕೆಯು ಹತ್ತರ ಒಳಗೆ ಎಂಬ ಸೂಚನೆಯಿದ್ದರೂ ಅದು ಅನಿವಾರ್ಯವಲ್ಲ.

3. ಒಂದು ಸಂಖ್ಯೆ ಅಥವಾ ಅಂಕೆ ಮನಸ್ಸಿನಲ್ಲಿಡಿ. ಅಷ್ಟನ್ನೇ ಗೆಳೆಯನಿಂದ ತೆಗೆದುಕೊಳ್ಳಿ. ನನ್ನ 60 ಸೇರಿಸಿರಿ. ಎಲ್ಲ ಕೂಡಿಸಿ ಸರಿ ಅರ್ಧ ದೇವರಿಗೆ ಬಿಡಿ, ಗೆಳೆಯನಿಂದ ತೆಗೆದುಕೊಂಡಿದ್ದನ್ನು ಅವನಿಗೆ ಕೊಡಿ. ನಿಮ್ಮ ಹತ್ತಿರ ಉಳಿದದ್ದೆಷ್ಟೆಂದು ನಾನು ಹೇಳುತ್ತೇನೆ.

ಉತ್ತರ: 30.

ವಿವರಣೆ: ನನ್ನ 60 ಎಂದಾಗ ಉತ್ತರ 30. ನನ್ನ 80 ಅಂದರೆ ಉತ್ತರ 40. ನೆನಪಿಡಿ ನಾನು ಕೊಟ್ಟ ಸಂಖ್ಯೆಯ ಅರ್ಧವು ಎದುರಾಳಿಯ ಉತ್ತರವಾಗಿರುತ್ತದೆ. ಇದು ಕೂಡ ಮೇಲಿನ ಈ ಗುಂಪಿನ ಗಣಿತಗಳ ಪಾಠಾಂತರವಾಗಿದೆ.

4. ನೀವು ಎರಡು ಅಂಕೆಯ ಸಂಖ್ಯೆಯನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ಅದಕ್ಕೆ 5 ರಿಂದ ಗುಣಿಸಿರಿ. ಗುಣಲಬ್ಧಕ್ಕೆ 5ನ್ನು ಕೂಡಿಸಿರಿ. ಈ ಮೊತ್ತಕ್ಕೆ 2ರಿಂದ ಗುಣಿಸಿ ಗುಣಲಬ್ಧಕ್ಕೆ 2ನ್ನು ಕೂಡಿಸಿರಿ. ಎಷ್ಟಾಯಿತು ಹೇಳಿರಿ. ನಿಮ್ಮ ಮನಸ್ಸಿನಲ್ಲಿರುವ ಸಂಖ್ಯೆಯನ್ನು ಹೇಳುತ್ತೇನೆ.

ಗುಟ್ಟು : ದೊರೆತ ಉತ್ತರದ ಕೊನೆಯ ಒಂದು ಅಂಕೆಯನ್ನು ಹೊಡೆದು ಹಾಕಿ ಉಳಿದದ್ದರಲ್ಲಿ ಒಂದನ್ನು ಕಳೆಯಿರಿ. ಆಗ ಸವಾಲುಗಾರನಿಗೆ ಎದುರಾಳಿಯ ಮನಸ್ಸಿನಲ್ಲಿರುವ ಅಂಕೆಯ ಸಂಖ್ಯೆ ದೊರೆಯುತ್ತದೆ.

5. ಒಂದು ಅಂಕೆ ಅಥವಾ ಸಂಖ್ಯೆಯನ್ನು ಮನಸ್ಸಿನಲ್ಲಿಡಿ. ಅದನ್ನು ಎರಡರಿಂದ ಗುಣಿಸಿರಿ. ನಿಮ್ಮ ಉತ್ತರಕ್ಕೆ ಮೂರನ್ನು ಕೂಡಿಸಿರಿ. ಬಂದ ಉತ್ತರವನ್ನು ಐದರಿಂದ ಗುಣಿಸಿರಿ. ಗುಣಾಕಾರವನ್ನು ನನಗೆ ಹೇಳಿರಿ.

ಗುಟ್ಟು : ಎದುರಾಳಿಯು ಹೇಳಿದ ಉತ್ತರದಲ್ಲಿಯ 15ನ್ನು ಕಳೆದು ಬಂದ ಉತ್ತರದ ಕೊನೆಯ ಅಂಕೆಯನ್ನು ಅಥವಾ ಶೂನ್ಯವನ್ನು ತೆಗೆಯಬೇಕು ಗುಣಾಕಾರ 95 ಆಗಿದ್ದರೆ .95–15=80; ಇಲ್ಲಿಯ ಶೂನ್ಯ ತೆಗೆದರೆ ಉತ್ತರ 8.

ತಾಳೆ: 8*2=16, 16+3=19, 19*5=95,

6. ಒಂದು ಅಂಕೆ/ಸಂಖ್ಯೆ ಗ್ರಹಿಸಬೇಕು. ಅದಕ್ಕೆ ಎರಡರಿಂದ ಗುಣಿಸಬೇಕು. ಬಂದ ಉತ್ತರಕ್ಕೆ 3 ರಿಂದ ಗುಣಿಸಿ ಉತ್ತರಕ್ಕೆ 5ರಿಂದ ಗುಣಿಸಬೇಕು. ಉತ್ತರ ಎಷ್ಟು?

ವಿಧಾನ : ಎದುರಾಳಿ ಹೇಳಿದ ಉತ್ತರದ ಸಂಖ್ಯೆಯ ಮುಂದಿನ ಶೂನ್ಯ ತೆಗೆದು ಹಾಕಿ 3ರಿಂದ ಭಾಗಿಸಿದರೆ . ಅಥವಾ ಆ ಉತ್ತರಕ್ಕೆ 30ರಿಂದ ಭಾಗಿಸಿದರೆ ಎದುರಾಳಿ ಗ್ರಹಿಸಿಕೊಂಡ ಸಂಖ್ಯೆ ದೊರೆಯುತ್ತದೆ. ತಾಳೆ ಮಾಡಿ ನೋಡಿರಿ.

7. 100ರಿಂದ 200ರವೊಳಗಿನ ಒಂದು ಸಂಖ್ಯೆಯನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಿರಿ. ಅದಕ್ಕೆ 2 ರಿಂದ ಗುಣಿಸಿರಿ. ಬಂದ ಉತ್ತರಕ್ಕೆ

5ರಿಂದ ಗುಣಿಸಿರಿ. ಬಂದ ಉತ್ತರಕ್ಕೆ 10 ಕೂಡಿಸಿ. ನಂತರ 10 ರಿಂದ ಗುಣಿಸಿರಿ. ಉತ್ತರ ಹೇಳಿರಿ.

ವಿಧಾನ: ದೊರೆತ ಉತ್ತರದಲ್ಲಿರುವ ಕೊನೆಯ 2 ಅಂಕೆ ಗಳನ್ನು ಹೊಡೆಯಬೇಕು. ಆಗ ಉಳಿದ ಸಂಖ್ಯೆಯಲ್ಲಿ 1ನ್ನು ಕಳೆಯಬೇಕು. ಬಂದ ಉತ್ತರವೇ ಎದುರಾಳಿಯು ಮನಸ್ಸಿನಲ್ಲಿಟ್ಟುಕೊಂಡ ಸಂಖ್ಯೆ.

ಉದಾ: ಎದುರಾಳಿಯ ಮನಸ್ಸಿನ ಸಂಖ್ಯೆ 120 ಇದ್ದಾಗ ಉತ್ತರವು 12100 ಇರುತ್ತದೆ. ಇದರಲ್ಲಿ ಕೊನೆಯ ಎರಡು ಸೊನ್ನೆ ತೆಗೆದು ಒಂದನ್ನು ಕಳೆದರೆ ಉತ್ತರವು 120 ಆಗಿರುತ್ತದೆ. ಇದು ಎದುರಾಳಿಯು ಮನಸ್ಸಿನಲ್ಲಿಟ್ಟುಕೊಂಡ ಸಂಖ್ಯೆ. ಗುಣಿಸಿರಿ. ಉತ್ತರ ಎಷ್ಟು?

8. 50ರಿಂದ 1000ವರೆಗಿನ ಒಂದು ಸಂಖ್ಯೆಯನ್ನು ಮನಸ್ಸಿನಲ್ಲಿಡಿರಿ. ಅದರಲ್ಲಿ 25ನ್ನು ಕಳೆಯಿರಿ. ಉತ್ತರಕ್ಕೆ 50ನ್ನು ಕೂಡಿಸಿರಿ. 10ರಿಂದ ಗುಣಿಸಿರಿ. ಬಂದ ಉತ್ತರದಿಂದ 250 ಕಳೆಯಿರಿ. ಉತ್ತರವನ್ನು ಹೇಳಿರಿ. ನಿಮ್ಮ ಮನಸ್ಸಿನಲ್ಲಿ ಇದ್ದ ಸಂಖ್ಯೆಯನ್ನು ನಾನು ಹೇಳುತ್ತೇನೆ.

ವಿಧಾನ; ದೊರೆತ ಉತ್ತರದ ಕೊನೆಯ ಸೊನ್ನೆಯನ್ನು ತೆಗೆದು ಹಾಕಿದರೆ ಉತ್ತರ ದೊರೆಯುತ್ತದೆ.

೧.೪. ಏರಿಳಿಯುವ ಗಣಿತ

1. ಒಂದು ಬಾವಿಯಲ್ಲಿ ಒಂದು ಕಪ್ಪೆಯಿತ್ತು. ಅದು ಬಾವಿಯ ತಳಭಾಗದಲ್ಲಿ ಇತ್ತು. ಅದು ಬಾವಿಯ ಮೇಲಕ್ಕೆ ಬರಲು ಪ್ರಯತ್ನಿಸುತ್ತಿತ್ತು. ಆ ಬಾವಿಗೆ 25 ಮೆಟ್ಟಿಲುಗಳಿದ್ದವು. ಆ ಕಪ್ಪೆ ಒಂದು ದಿನಕ್ಕೆ ಐದು ಮೆಟ್ಟಿಲು ಮೇಲಕ್ಕೆ ಜಿಗಿದರೆ 4 ಮೆಟ್ಟಿಲು ಕೆಳಕ್ಕೆಬರುತ್ತದೆ. ಇದೇ ರೀತಿ ಏರಿಳಿಯುತ್ತ ಅದು ಕೆಲವು ದಿನಗಳಲ್ಲಿ ಬಾವಿಯ ಮೇಲ್ಭಾಗವನ್ನು ತಲುಪಿತು. ಹಾಗಾದರೆ ಬಾವಿಯ ಮೇಲ್ಭಾಗಕ್ಕೆ ತಲುಪಲು ಅದಕ್ಕೆ ಬೇಕಾದ ಕಾಲಾವಕಾಶ ಎಷ್ಟು?

ಉತ್ತರ: 21 ದಿನ.

ವಿವರಣೆ: ಕಪ್ಪೆ ಪ್ರತಿದಿನ ಒಂದು ಮೆಟ್ಟಿಲು ಮೇಲಕ್ಕೇರುತ್ತದೆ. (5–4=1) ಆದ್ದರಿಂದ 20 ಮೆಟ್ಟಿಲನ್ನು 20 ದಿನದಲ್ಲಿ ಮುಗಿಸಿ 21ನೆಯ ದಿನಕ್ಕೆ 25ನೆಯ ಮೆಟ್ಟಿಲನ್ನು ಮುಟ್ಟಿ ಅಲ್ಲಿ ಕುಳಿತು ಕೊಳ್ಳುತ್ತದೆ. ಯಾಕೆಂದರೆ ಅದು ಕೆಳಗೆ ಜಾರುವದಿಲ್ಲ.

2. ಒಂದು ಕಂಬದ ಎತ್ತರ 10 ಅಡಿ. ಆ ಕಂಬದ ಮೇಲೆ ಒಂದು ತೆಂಗಿನಕಾಯಿಯ ಕಡಿ ಇದೆ. ಒಂದು ಇಲಿ ಆ ಕಾಯಿ ಕಡಿಯನ್ನು ತಿನ್ನುವ ಸಲುವಾಗಿ ಕಂಬದತ್ತ ಜಿಗಿಯತ್ತದೆ. ಕಂಬಕ್ಕೆ ಅದು ನೆಗೆದು ಒಮ್ಮೆ ಹಾರಿದರೆ ಮೂರು ಅಡಿ ಎತ್ತರಕ್ಕೆ ಹಾರಬಲ್ಲದು. ಆದರೆ ಜಾರಿ ಎರಡು ಅಡಿ ಹಿಂದಕ್ಕೆ ಸರಿಯುತ್ತದೆ. ಇದೇ ರೀತಿ ಹಾರುತ್ತಿದ್ದರೆ ಅದು ಕಾಯಿಮುಟ್ಟಲು ಎಷ್ಟು ಸಾರೆ ಹಾರಬೇಕು?

ಉತ್ತರ: 8 ಸಾರೆ.

ವಿಧಾನ: ಇಲಿಯ ವೇಗ ಮೂರು ಅಡಿ. ಆದ್ದರಿಂದ 10ರಲ್ಲಿ 3ನ್ನು ಕಳೆಯಿರಿ. 7ದಿನದಲ್ಲಿ ಅದು 7 ಅಡಿ ಹೋಗಿ, 8ನೆಯ ದಿನ ಮೂರು ಅಡಿ ಹಾರಿ. ಕಾಯಿಕಡಿಯನ್ನು ಮುಟ್ಟುತ್ತದೆ.

3. ಒಂದು ಗುಳ್ಳೆಯು ಹತ್ತು ಅಡಿ ಎತ್ತರದ ಒಂದು ಮರವನ್ನು ಏರಲು ಪ್ರಯತ್ನಿಸುತ್ತದೆ. ಅದು ಮೊದಲನೆ ದಿನ ನಾಲ್ಕು ಅಡಿ ಮೇಲೇರಿದರೆ ಎರಡನೆ ದಿನ ಮೂರು ಅಡಿ ಕೆಳಗೆ ಜಾರುತ್ತದೆ. ಮೂರನೆ ದಿನ ನಾಲ್ಕು ಅಡಿ ಮೇಲೇರಿದರೆ ನಾಲ್ಕನೆ ದಿನ ಮೂರು ಅಡಿ ಕೆಳಗೆ ಜಾರುತ್ತದೆ. ಹಾಗಾದರೇ ಎಷ್ಟು ದಿನದಲ್ಲಿ ಅದು ಗೋಡೆಯ ತುದಿಯನ್ನು ಮುಟ್ಟುತ್ತದೆ?

ಉತ್ತರ: 13ದಿನ.

ವಿವರಣೆ: ಗುಳ್ಳೆಯು ಎರಡು ದಿನಕ್ಕೆ ಒಂದು ಅಡಿ ಮೇಲಕ್ಕೆ ಹೋಗುತ್ತದೆ. 12ದಿನಕ್ಕೆ 6ಅಡಿ ಮೇಲಕ್ಕೆ ಹೋಗುತ್ತದೆ. 13ನೇಯ ದಿನ 4ಅಡಿ ಮೇಲಕ್ಕೆ ಏರಿ ಕೆಳಗೆ ಜಾರುವದಿಲ್ಲ. ಇಂಥ ಲೆಕ್ಕದಲ್ಲಿ ಅದು ಚಲಿಸುವ ಎತ್ತರದಿಂದ ಅದರ ವೇಗವನ್ನು ಕಳೆದು ಮುಂದೆ

ಸ್ಸಾಗಬೇಕು. ಉದಾ: 10−4=6. ಈ 6ಅಡಿಯನ್ನು ಏರಲು ಎಷ್ಟು ದಿನ ಬೇಕೆಂದು ಲೆಕ್ಕಹಾಕಿದರೆ ಅದು ಸುಲಭ.

4. 10 ಮೀಟರ್ ಉದ್ದದ ಹಾಗೂ ಒಂದು ಮೀಟರ್ ಅಗಲದ ಒಂದು ತೋಟವಿದೆ. ಎರಡು ತೆಂಗಿನ ಮರಗಳ ನಡುವೆ ಒಂದು ಮೀಟರ್ ಅಂತರವಿರುವಂತೆ ಎಷ್ಟು ತೆಂಗಿನ ಮರ ನೆಡಬಹುದು.

ಉತ್ತರ: 11.

5. ಹತ್ತು ಮೀಟರು ಬಟ್ಟೆಯಿದೆ. ದಿನಕ್ಕೊಂದು ಮೀಟರು ಬಟ್ಟೆಯಂತೆ ಕತ್ತರಿಸಿದರೆ ಎಷ್ಟು ದಿನದಲ್ಲಿ ಒಟ್ಟು ಬಟ್ಟೆಯನ್ನು ಕತ್ತರಿಸಿ ಮುಗಿಯುತ್ತದೆ?

ಉತ್ತರ: 9 ದಿನ.

6. ಒಂದು ಸಾಲು ಮನೆಗಳಿವೆ. ಸಾಲಿನಲ್ಲಿ 28 ಮನೆಗಳಿವೆ. ಪೂರ್ವದಿಂದ ಹೊರಟರೆ ನನ್ನ ಗೆಳೆಯನ ಮನೆ ಒಂಬತ್ತನೆಯದು. ಹಾಗಾದರೆ ಪಶ್ಚಿಮದಿಂದ ಹೊರಟರೆ ಅದು ಎಷ್ಟನೆಯದು?

ಉತ್ತರ: 20ನೆಯದು.

7. ಒಂದು ಒಲೆ ಹೂಡಲು 3 ಗುಂಡುಗಳು ಬೇಕು. ಆದರೆ 8 ಒಲೆ ಹೂಡಲು ಎಷ್ಟು ಗುಂಡುಗಳು ಬೇಕು?

ಉತ್ತರ : 17 ಗುಂಡುಗಳು.

8. 68 ಕಣ್ಣು, 106 ಕಾಲು ಇವೆ. ಅಂದರೆ ಎಷ್ಟು ಕೋಳಿ ಮತ್ತು ಕುರಿಗಳಿವೆ?

ಉತ್ತರ : 15 ಕೋಳಿ. ಮತ್ತು 19 ಕುರಿಗಳು.

9. ಒಂದು ದೊಡ್ಡ ಮೈದಾನ. ಅಲ್ಲಿ ಎಷ್ಟೋ ಕುದುರೆಗಳಿವೆ. ಎಷ್ಟೋ ಮನುಷ್ಯರಿದ್ದಾರೆ. ಅಲ್ಲಿ 74 ಕಾಲು, 27 ತಲೆ ಕಾಣುತ್ತಿದ್ದರೆ ಕುದುರೆ ಎಷ್ಟು? ಮನುಷ್ಯರೆಷ್ಟು?

ಉತ್ತರ: 10 ಕುದುರೆ, 17 ಮನುಷ್ಯ.

೧.೫. ದ್ವಿಗುಣ

1. ಒಂದು ದೇವಸ್ಥಾನದ ಮುಂದೆ 3 ದೀಪದ ಕಂಬಗಳಿವೆ. ಅವುಗಳಿಗೆ ಎಣ್ಣೆಹಾಕಿ ದೀಪ ಹಚ್ಚುತ್ತಾರೆ. ಆದರೆ ಅಲ್ಲೊಂದು ವಿಸ್ಮಯ ನಡೆಯುತ್ತದೆ ಅದೇನೆಂದರೆ ನಾವು ಕಂಬವನ್ನು ಹತ್ತುವಾಗ ಎಷ್ಟು ಎಣ್ಣೆಯನ್ನು ತೆಗೆದುಕೊಂಡು ಹೋಗುತ್ತವೆಯೋ ಅದು ಅಲ್ಲಿ ಅದರ ಎರಡರಷ್ಟಾಗುತ್ತದೆ. ಅಲ್ಲಿ ದೀಪಕ್ಕೆ ಎಣ್ಣೆಯನ್ನು ಹಾಕಿ ಉಳಿದ ಎಣ್ಣೆಯನ್ನು ತೆಗೆದುಕೊಂಡು ಇಳಿದರೆ ಆ ಉಳಿದ ಎಣ್ಣೆಯು ದುಪ್ಪಟ್ಟಾಗುತ್ತದೆ. ಎರಡನೆಯ ಕಂಬಕ್ಕೆ ಹೋದರೆ ಅಲ್ಲಿ ಎಣ್ಣೆಯು ಮತ್ತೆ ದುಪ್ಪಟ್ಟಾಗುತ್ತದೆ. ಇದೇ ರೀತಿ 3 ಕಂಬಗಳಲ್ಲಿಯೂ ನಡೆಯುತ್ತದೆ. ಹಾಗಾದರೆ ನಾವು ಎಷ್ಟು ಸೇರು ಎಣ್ಣೆಯನ್ನು ತೆಗೆದುಕೊಂಡು ಹೋದರೆ 3 ದೀಪಗಳಿಗೆ ಸರಿಯಾಗಿ ಎಣ್ಣೆಯನ್ನು ಹಾಕಬಹುದು.

ಉತ್ತರ: ನಾವು 5.25 ಸೇರು ಎಣ್ಣೆಯನ್ನು ತೆಗೆದುಕೊಂಡು ಹೋಗಬೇಕು.

ತಾಳೆ ವಿಧಾನ: 5.25 ಸೇರು ಎಣ್ಣೆ ತೆಗೆದುಕೊಂಡು ಒಂದನೇ ಕಂಬ ಹತ್ತಿವ ಕೂಡಲೇ 10.50 ಸೇರು ಎಣ್ಣೆಯಾಗುತ್ತದೆ. ಅಲ್ಲಿ ದೀಪಕ್ಕೆ ಎಂಟು ಸೇರು ಎಣ್ಣೆಯನ್ನು ಹಾಕಬೇಕು. ಉಳಿದದ್ದು 2.50 ಸೇರು. ಈಗ ಕೆಳಗಿಳಿದ ಕೂಡಲೇ ಅದು 5 ಸೇರು ಆಗುತ್ತದೆ. 2 ನೇ ಕಂಬ ಹತ್ತಿದ ಕೂಡಲೇ ಅದು 10 ಸೇರು ಆಗುತ್ತದೆ. ಅಲ್ಲಿ ಪುನಃ 8 ಸೇರು ಎಣ್ಣೆಯನ್ನು ಹಾಕಬೇಕು. ಈಗ 2 ಸೇರು ಉಳಿಯಿತು. 2ನೇ ಕಂಬ ಇಳಿದ ಕೂಡಲೇ 4 ಸೇರು ಎಣ್ಣೆ ಆಗುತ್ತದೆ. 3ನೇ ಕಂಬ ಹತ್ತಿದ ಕೂಡಲೇ ಅದು 8ಸೇರು ಆಗುತ್ತದೆ. ಅದನ್ನು 3ನೇ ಕಂಬಕ್ಕೆ ಹಾಕಿ ನಾವು ಕೆಳಗೆ ಬಂದು ಬಿಟ್ಟರೆ ಪ್ರತಿ ಕಂಬಕ್ಕೆ ಸರಿಯಾಗಿ ಎಂಟೆಂಟು ಸೇರು ಎಣ್ಣೆ ದೊರೆಯುತ್ತದೆ

2. ಒಂದು ಕೆರೆಯಲ್ಲಿ ಮೂರು ದೇವರಿವೆ. ಒಬ್ಬನು ಕೆಲವು ಹೂವುಗಳನ್ನು ತೆಗೆದುಕೊಂಡು ಅಲ್ಲಿಗೆ ಹೋಗುತ್ತಾನೆ. ಅವನು ತಾನು ಒಯ್ದ ಹೂವುಗಳನ್ನು ಹಿಡಿದುಕೊಂಡು ಕೆರೆಯಲ್ಲಿ ಮುಳುಗಿದನು. ಆಗ ಅವನು ಎಣಿಸಿ ನೋಡಿದನು. ಮುಳುಗುವ ಮುಂಚೆ ಕೈಯ್ಯಲ್ಲಿದ್ದ ಹೂಗಳ ಎರಡು ಪಟ್ಟು ಹೂಗಳು ಅಲ್ಲಿದ್ದವು. ಅವುಗಳಲ್ಲಿ ಕೆಲವು ಹೂಗಳನ್ನು ಮೊದಲು ಕಂಡ ದೇವರಿಗೆ ಮುಡಿಸಿದನು. ಉಳಿದ ಹೂಗಳನ್ನು ಹಿಡಿದುಕೊಂಡು ಮುಂದೆ ಹೋದನು. ಅಲ್ಲಿ ಇನ್ನೊಂದು ದೇವರನ್ನು ಕಂಡನು. ಅಲ್ಲಿ ಒಂದು ಕೆರೆಯಿತ್ತು. ಕೆರೆಯಲ್ಲಿ ಮುಳುಗಿದನು. ಆಗ ಅವನ ಕೈಯ್ಯಲ್ಲಿದ್ದ ಹೂಗಳು ಎರಡು ಪಟ್ಟಾದವು. ಮೊದಲು ಸಿಕ್ಕ ದೇವರಿಗೆ ಮುಡಿಸಿದಷ್ಟೇ ಹೂಗಳನ್ನು ಈ ದೇವರಿಗೂ ಮುಡಿಸಿದನು.

ಭಕ್ತನು ಮುಂದೆ ಹೋದನು ಅಲ್ಲಿ ಒಂದು ಕೆರೆ ಕಂಡಿತು ಅವನು ತನ್ನ ಕೈಯ್ಯಲ್ಲಿದ್ದ ಹೂವುಗಳೊಂದಿಗೆ ಕೆರೆಯಲ್ಲಿ ಮುಳುಗಿ ಎದ್ದನು. ಆಗ ಅವನ ಕೈಯ್ಯಲ್ಲಿ ಹೂವುಗಳನ್ನು ಎಣಿಸಿದನು. ಅವನು ಮುಳುಗುವಾಗ ಇದ್ದ ಹೂಗಳ ಎರಡು ಪಟ್ಟು ಹೂವುಗಳು ಅಲ್ಲಿ ಇದ್ದವು. ಭಕ್ತನು ಆ ಹೂಗಳೊಂದಿಗೆ ಮುಂದೆ ನಡೆದನು. ಅಲ್ಲಿ ಮೂರನೆಯ ದೇವರನ್ನು ಕಂಡನು. ಅದಕ್ಕೆ ಮೊದಲನೆಯ ದೇವರಿಗೆ ಮುಡಿಸಿದಷ್ಟೇ ಹೂವುಗಳನ್ನು ಮುಡಿಸಿದನು. ಈಗ ಭಕ್ತನ ಕೈಯ್ಯಲ್ಲಿ ಒಂದು ಹೂವು ಕೂಡ ಇರಲಿಲ್ಲ. ಹಾಗಾದರೆ ಭಕ್ತನು ದೇವಾಲಯಗಳಿಗೆ ಹೊರಡುವಾಗ ಎಷ್ಟು ಹೂಗಳಿದ್ದವು?

ಉತ್ತರ: ಏಳು ಹೂವುಗಳು.

ವಿವರಣೆ: ಅವನು ಮನೆಯಿಂದ 7 ಹೂವನ್ನು ತೆಗೆದುಕೊಂಡು ಹೋಗಿ ಅಲ್ಲಿ 8 ಹೂವನ್ನು ಪ್ರತಿ ದೇವರಿಗೂ ಹಾಕಿದನು. ಮೊದಲಿನ ಕೆರೆಯಲ್ಲಿ 7 ಹೂವನ್ನು ಹಿಡಿದು ಮುಳುಗಿದನು. ಆಗ 14 ಹೂವುಗಳಾದವು. ಮೊದಲ ದೇವರಿಗೆ 8 ಹೂವುಗಳನ್ನು ಹಾಕಿ

6 ಹೂವನ್ನು ತೆಗೆದುಕೊಂಡು ಮುಳುಗಿದನು. 12 ಹೂವು ಆಯಿತು. ಅದರಲ್ಲಿ 8 ಹೂವು ದೇವರಿಗೆ ಹಾಕಿದನು. ಉಳಿದ ನಾಲ್ಕು ಹೂವಿನೊಂದಿಗೆ ಕೆರೆಯಲ್ಲಿ ಮುಳುಗಿದನು. ಆಗ 8 ಆಯಿತು.ಇದನ್ನು ಮೂರನೆ ದೇವರಿಗೆ ಹಾಕಿದನು.

3. ಅಶೋಕನು ಒಂದು ಬೆಂಕಿಗೆ ಹೋದನು. ಅಲ್ಲಿ ಮೂರುಜನ ಕಾವಲುಗಾರರು ಇದ್ದರು. ಅಶೋಕನು ಮೊದಲನೆಯ ಕಾವಲುಗಾರನ ಹತ್ತಿರ ತಾನು ತಂದ ಹಣವನ್ನು ಕೊಟ್ಟನು. ಆಗ ಕಾವಲುಗಾರನು ಅಶೋಕನಿಗೆ ಎರಡು ಪಟ್ಟು ಹಣವನ್ನು ಕೊಟ್ಟನು. ಅಶೋಕನು ಕಾವಲುಗಾರನಿಗೆ ಒಂದು ರೂಪಾಯಿ ತಿರುಗಿ ಕೊಟ್ಟನು. ಮುಂದೆ ಹೋಗಿ ಅಶೋಕನು ಉಳಿದ ಹಣವನ್ನು ಕಾವಲುಗಾರನಿಗೆ ಕೊಟ್ಟನು. ಕಾವಲುಗಾರನು ತಾನು ಪಡೆದ ಎರಡು ಪಟ್ಟು ಹಣವನ್ನು ಅಶೋಕನಿಗೆ ನೀಡಿದನು. ಅಶೋಕನು ಕಾವಲುಗಾರನಿಗೆ ಒಂದು ರೂಪಾಯಿಯನ್ನು ತಿರುಗಿ ಕೊಟ್ಟನು. ಹೀಗೆ ಮೂರನೆಯ ಕಾವಲುಗಾರನ ಬಳಿ ಹೋಗಿ ತಾನು ತಂದ ಹಣವನ್ನು ಕಾವಲುಗಾರನಿಗೆ ಕೊಟ್ಟನು. ಕಾವಲುಗಾರನು ಅದರ ಎರಡು ಪಟ್ಟು ಹಣವನ್ನು ಅಶೋಕನಿಗೆ ಕೊಟ್ಟನು. ಅಶೋಕನು ಒಂದು ರೂಪಾಯಿಯನ್ನು ಮೂರನೆಯ ಕಾವಲುಗಾರನಿಗೆ ಕೊಟ್ಟನು. ಈಗ ಅವನ ಬಳಿ ಯಾವ ಹಣವು ಇರಲಿಲ್ಲ. ಹಾಗಾದರೆ ಅಶೋಕನು ಬೆಂಕಿಗೆ ತಂದ ಹಣ ಎಷ್ಟು?

ಉತ್ತರ: 14 ಆಣೆ.

೧.೬. ಅರ್ಧ

1. ಒಂದು ದೇವಸ್ಥಾನಕ್ಕೆ 7 ಬಾಗಿಲುಗಳಿವೆ. ಪ್ರತಿ ಬಾಗಿಲಿಗೂ ಬಾಗಿಲು ಕಾಯುವವರಿದ್ದಾರೆ. ಪ್ರತಿಬಾಗಿಲಿನವರಿಗೂ ನಾವು ತೆಗೆದು ಕೊಂಡು ಹೋದ ತೆಂಗಿನಕಾಯಿಯ ಅರ್ಧವನ್ನು ಕೊಡಬೇಕು. ಕೊನೆಗೆ ದೇವರಿಗೆ ಕೊಡಲು 1 ತೆಂಗಿನಕಾಯಿ ಉಳಿಯುತ್ತದೆ. ನಾವು

ದೇವಸ್ಥಾನಕ್ಕೆ ಎಷ್ಟು ತೆಂಗಿನ ಕಾಯಿಗಳನ್ನು ಒಯ್ಯಬೇಕು

ಉತ್ತರ: 128 ತೆಂಗಿನ ಕಾಯಿ ಒಯ್ಯಬೇಕು.

ವಿಧಾನ: 128 – 64, – 32 – 16– 8– 4 – 2, – 1
ಗುಟ್ಟು : ಕೊನೆಯಲ್ಲಿ ಉಳಿದಿರುವ ಅಂಕೆಯನ್ನು ಏಳು ಸಾರಿ ದ್ವಿಗುಣಗೊಳಿಸಿದರೆ ನಾವು ಒಯ್ಯಬೇಕಾದ ತೆಂಗಿನ ಕಾಯಿಯ ಸಂಖ್ಯೆ ದೊರೆಯುತ್ತದೆ.

2. ಒಬ್ಬ ಹಳ್ಳಿಯವನು ರಾಜನಿಗೆ ಕಾಣಿಕೆ ಕೊಡಲೆಂದು ಒಂದಿಷ್ಟು ಹಣ್ಣುಗಳನ್ನು ಬುಟ್ಟಿಯಲ್ಲಿ ತುಂಬಿಕೊಂಡು ಬರುತ್ತಾನೆ. ಅವನು ಅರಮನೆಯನ್ನು ಮುಟ್ಟುವವರೆಗೆ ಏಳು ಸುಂಕದ ಕಟ್ಟೆಯನ್ನು ದಾಟಬೇಕು. ಸುಂಕದವನು ಹಳ್ಳಿಯವನಿಂದ ಅವನಲ್ಲಿದ್ದ ಹಣ್ಣುಗಳ ಅರ್ಧದಷ್ಟನ್ನು ಸುಂಕವಾಗಿ ಪಡೆಯುತ್ತಾನೆ. ಕೊನೆಯಲ್ಲಿ ರಾಜನಿಗೆ ಕೊಡಲು ಅವನ ಬಳಿ ಅರ್ಧ ಹಣ್ಣು ಮಾತ್ರ ಉಳಿಯಿತು. ಹಾಗಾದರೆ ಹಳ್ಳಿಯವನು ತಂದ ಹಣ್ಣುಗಳೆಷ್ಟು?

ಉತ್ತರ: 64.

ವಿಧಾನ: 64 – 32, 32 – 16, 16 – 8, 8 – 4, 4 – 2, 2 – 1, 1 – 1/2

ಹೀಗೆ ಹೆಚ್ಚಾಗಿ ಏಳುಬಾಗಿಲುಗಳನ್ನು, ಏಳು ಸುಂಕದ ಕಟ್ಟೆಗಳನ್ನು ಅಥವಾ ಬೇರೆ ಬೇರೆ ಅಂಕೆ ಸಂಖ್ಯೆ ಗಳನ್ನು ಮೂಲವಾಗಿಟ್ಟುಕೊಂಡು ಕೊನೆಯಲ್ಲಿ ಉಳಿದ ವಸ್ತುವಿನ ಮೊತ್ತವನ್ನು ಹಲವು ಬಗೆಯಾಗಿ ಹೇಳಿ ನೂರಾರು ಗಣಿತಗಳನ್ನು ರಚಿಸಿ.

3. ಒಬ್ಬನು ಒಂದು ತೋಟದಿಂದ ಬರುವಾಗ ದಾರಿಯಲ್ಲಿ ಒಬ್ಬರನಂತರ ಒಬ್ಬರಂತೆ 6 ಜನರು ಅವನನ್ನು ಭೆಟ್ಟಿಯಾಗುತ್ತಾರೆ. ಆ ಪ್ರತಿಯೊಬ್ಬರು. ತೋಟಿಗನ ಹತ್ತಿರ ನೀನು ತಂದ ಲಿಂಬೆ ಹಣ್ಣಿನಲ್ಲಿ ಸರಿಯಾಗಿ ಅರ್ಧಪಾಲನ್ನು ನಮಗೆ ಕೊಡಬೇಕು

ಎನ್ನುತ್ತಾರೆ. ತೋಟಿಗನು ಅವರು ತಿಳಿಸಿದಂತೆ ಲಿಂಬುಗಳನ್ನು ಕೊಡುತ್ತ ಬಂದರೂಅವನ ಬಳಿ ಎರಡು ಲಿಂಬುಗಳು ಉಳಿಯುತ್ತವೆ. ಹಾಗಾದರೆ ಅವನು ತೋಟದಿಂದ ಬರುವಾಗ ಎಷ್ಟು ಲಿಂಬುಗಳನ್ನು ತಂದಿದ್ದನು?

ಉತ್ತರ: 64.

4 ಒಂದು ಕೋಟೆಗೆ ಎಷ್ಟೋ ಬಾಗಿಲುಗಳು ? ಒಬ್ಬನು ಪ್ರತಿ ಬಾಗಿಲಿನಲ್ಲಿ ಅವನು ತಂದ ಹಣ್ಣಿನ ಅರ್ಧವನ್ನು ಬಾಗಿಲು ಕಾಯುವವನಿಗೆ ಕೊಡುತ್ತಾನೆ. ಬಾಗಿಲು ಕಾಯುವವನು ಅವನಿಗೆ ಒಂದು ಹಣ್ಣನ್ನು ಕೊಡುತ್ತಾನೆ. ಕೋಟೆಯ ಹೊರಗೆ ಬಂದಾಗ ಅವನ ಹತ್ತಿರ ಎರಡು ಹಣ್ಣು ಇರುತ್ತವೆ. ಹಾಗಾದರೆ ಕೋಟೆಗೆ ಬಾಗಿಲುಗಳೆಷ್ಟು?

ಉತ್ತರ: ಒಂದು ಬಾಗಿಲು.

೧.೭. ರಹಸ್ಯವಾಗಿ ಹಂಚಿಕೊಳ್ಳುವುದು.

1. ಏಳು ಜನ ಕಳ್ಳರು ಒಬ್ಬ ಸಾವುಕಾರನ ಮನೆಗೆ ಕನ್ನಹಾಕಿ ದುಡ್ಡಿನ ಪೆಟ್ಟಿಗೆ ತಂದರು. ಅದರಲ್ಲಿ ಎಷ್ಟೋ ಹಣವಿತ್ತು. ಅದನ್ನು ಏಳು ಜನ ಹಂಚಿಕೊಂಡರೆ ಅವರಿಗೆ ಸಮಸಮ ಪಾಲು ದೊರೆಯುವುದು. 6,5,4,3,2 ಜನರಂತೆ ಪಾಲು ಮಾಡಿಕೊಳ್ಳಲು ಹೋದರೆ ಪ್ರತಿಬಾರಿ ಒಂದೊಂದು ರೂಪಾಯಿ ಹೆಚ್ಚು ಉಳಿದು ಬಿಡುತ್ತದೆ. ಆದರೂ ಏಳು ಜನ ಸಮನಾಗಿ ಹಂಚಿಕೊಂಡರು. ಹಾಗಾದರೆ ಆ ಪೆಟ್ಟಿಗೆಯಲ್ಲಿದ್ದ ಹಣವೆಷ್ಟು?

ಉತ್ತರ: ಕಳ್ಳರು ತಂದದ್ದು 301 ರೂಪಾಯಿ.

ತಾಳೆ : ಈ ಹಣವನ್ನು ಆರು ಜನ ಹಂಚಿಕೊಂಡರೆ ಪ್ರತಿಯೊಬ್ಬರಿಗೆ 50 ರೂಪಾಯಿ ಬರುತ್ತದೆ. 1 ರೂ ಉಳಿಯುತ್ತದೆ. ಐದು ಜನ ಹಂಚಿಕೊಂಡರೆ ಪ್ರತಿಯೊಬ್ಬರಿಗೆ 60 ರೂ ಬರುತ್ತದೆ. 1 ರೂ ಉಳಿಯುತ್ತದೆ. ನಾಲ್ಕು ಜನ ಹಂಚಿಕೊಂಡರೆ ಪ್ರತಿ

ಯೊಬ್ಬರಿಗೆ 75 ರೂ ಬರುತ್ತದೆ. 1 ರೂ ಉಳಿಯುತ್ತದೆ.

ಮೂರು ಜನ ಹಂಚಿಕೊಂಡರೆ ಪ್ರತಿಯೊಬ್ಬರಿಗೆ 100 ರೂ ಬರುತ್ತದೆ. 1 ರೂ ಉಳಿಯುತ್ತದೆ. ಎರಡು ಜನ ಹಂಚಿಕೊಂಡರೆ ಪ್ರತಿಯೊಬ್ಬರಿಗೆ 150 ರೂ ಬರುತ್ತದೆ. 1 ರೂ ಉಳಿಯುತ್ತದೆ.

ಒಬ್ಬನೇ ಹಂಚಿಕೊಂಡರೆ 301 ರೂಪಾಯಿ ಅವನದಾಗುತ್ತದೆ. ಆದ್ದರಿಂದ 7 ಜನಕಳ್ಳರು ಸಮನಾಗಿ ಹಣ ಹಂಚುಕೊಂಡದ್ದು – 301 ರೂ. ಈಗ ಪ್ರತಿಯೊಬ್ಬರಿಗೆ 43ರೂ. ದೊರೆಯುತ್ತದೆ.

2. ಮೂರುಜನ ಕಳ್ಳರಿದ್ದರು. ಅವರು ಒಂದು ಬಾಳೆಹಣ್ಣಿನ ಕೊನೆಯನ್ನು ಕದ್ದು ತಂದರು. ಅದನ್ನು ಮರುದಿನ ತಿಂದರಾಯಿತೆಂದು ಯೋಚಿಸಿ ಎಲ್ಲರೂ ಮಲಗಿದರು. ಆದರೆ ಒಬ್ಬನಿಗೆ ಮೊದಲೇ ಎಚ್ಚರವಾಯಿತು. ಅವನು ಹೋಗಿ ಬಾಳೆ ಕೊನೆಯಲ್ಲಿದ್ದ ಹಣ್ಣುಗಳನ್ನು ಲೆಕ್ಕಮಾಡಿದನು. ಅವನು ಈ ಹಣ್ಣುಗಳನ್ನು ಮನಸ್ಸಿನಲ್ಲಿ ಮೂರು ಪಾಲು ಮಾಡಿದನು. ಒಂದು ಹಣ್ಣು ಹೆಚ್ಚಿಗೆ ಉಳಿಯಿತು. ಮೊದಲು ಬಂದ ಈ ಕಳ್ಳನು ತನ್ನ ಪಾಲಿಗೆ ಬಂದ ಹಾಗೂ ಹೆಚ್ಚಿಗೆ ಉಳಿದ ಒಂದು ಹಣ್ಣನ್ನು ಕೂಡಿಸಿಕೊಂಡು ತಿಂದು ಮಲಗಿದನು.

ಸ್ವಲ್ಪ ಹೊತ್ತಿನ ಮೇಲೆ ಇನ್ನೊಬ್ಬ ಕಳ್ಳನು ಎದ್ದನು. ಆತನೂ ಕತ್ತಲಲ್ಲಿಯೇ ಹೋಗಿ ಉಳಿದ ಹಣ್ಣುಗಳನ್ನು ಮೂರು ಪಾಲು ಮಾಡಿದನು. ಆಗಲೂ ಒಂದು ಹಣ್ಣು ಹೆಚ್ಚಿಗೆ ಉಳಿಯಿತು. ಅವನು ತನ್ನ ಪಾಲು ಹಾಗೂ ಹೆಚ್ಚಿಗೆ ಉಳಿದ ಹಣ್ಣನ್ನು ತಿಂದನು.

ಹಾಗೆಯೇ ಮೂರನೆಯವನು ಕತ್ತಲಲ್ಲಿ ಹೋಗಿ ಹಣ್ಣು ಲೆಕ್ಕಮಾಡಿ ಮೂರು ಪಾಲನ್ನು ಮಾಡಿ ಆಗ ಹೆಚ್ಚುಳಿದ ಒಂದು ಹಣ್ಣನ್ನು ಹಾಗೂ ತನ್ನ ಪಾಲಿನ ಹಣ್ಣುಗಳನ್ನು ತಿಂದನು. ಹಾಗಾದರೆ ಬಾಳೆಕೊನೆಯಲ್ಲಿದ್ದ ಹಣ್ಣುಗಳೆಷ್ಟು? ಮತ್ತು ಪ್ರತಿಯೊಬ್ಬರ ಪಾಲಿಗೆ ಬಂದ ಹಣ್ಣೆಷ್ಟು?

ಉತ್ತರ: ಬಾಳೆ ಕೊನೆಯಲ್ಲಿದ್ದ ಹಣ್ಣು 25. ಮೊದಲನೆಯವನ

ಪಾಲಿಗೆ ಬಂದ ಹಣ್ಣು 9+2=11. ಎರಡನೆಯವನ ಪಾಲಿಗೆ ಬಂದ ಹಣ್ಣು 6+2=8. ಮೂರನೆಯವನಿಗೆ 4+2=6.

೧.೮. ಒಂದು ಮೂಟೆ ಉಳಿಸುವುದು.

1. ತೆಂಗಿನಕಾಯಿ ವ್ಯಾಪಾರಿಗೆ ಇಬ್ಬರು ಮಕ್ಕಳು. ಅವನು ಸಂತೆಯಲ್ಲಿ ತೆಂಗಿನ ಕಾಯಿಯನ್ನು ಕೊಂಡನು. ಒಬ್ಬೊಬ್ಬರ ತಲೆಯ ಮೇಲೆ ಒಂದೊಂದು ಮೂಟೆ ಹೊರಿಸಿ ಮನೆಗೆ ಒಯ್ಯಲು ತಿಳಿಸಿದನು. ಪ್ರತಿ ಮೂಟೆಯಲ್ಲಿ 50 ತೆಂಗಿನ ಕಾಯಿಗಳಿದ್ದವು. ದಾರಿಯಲ್ಲಿ 50 ಸುಂಕದ ಕಟ್ಟೆಗಳಿದ್ದವು. ಪ್ರತಿಯೊಂದು ಕಟ್ಟೆಯಲ್ಲಿ ಪ್ರತಿ ಮೂಟೆಗೊಂದರಂತೆ ತೆಂಗಿನ ಕಾಯಿಯ ಸುಂಕ ಕೊಡುವುದು ಅಲ್ಲಿಯ ನಿಯಮ. ಆದರೆ ಈ ಅಣ್ಣ ತಮ್ಮ ಜಾಣತನವನ್ನು ಉಪಯೋಗಿಸಿಕೊಂಡು ಕೆಲವು ತೆಂಗಿನಕಾಯಿ ಮನೆಗೊಯ್ದರು. ಅದು ಹೇಗೆ? ಎಷ್ಟು ತೆಂಗಿನ ಕಾಯಿ ಉಳಿಸಿದರು?

ಉತ್ತರ : ತಮ್ಮನು ಅಣ್ಣನ ಹತ್ತಿರ "ನಿನ್ನ ಮೂಟೆಯಿಂದ ಇಬ್ಬರ ಸುಂಕವನ್ನು ಕೊಡು" ಎಂದು ಉಪಾಯ ಹೇಳಿಕೊಟ್ಟನು. ಅಣ್ಣನು ತನ್ನ ಮೂಟೆಯಿಂದ ಪ್ರತಿ ಸುಂಕದ ಕಟ್ಟೆಯಲ್ಲಿ ಎರಡೆರಡು ತೆಂಗಿನ ಕಾಯಿಗಳನ್ನು ಸುಂಕವಾಗಿ ಕೊಡುತ್ತಾಬಂದನು. ಇಪ್ಪತ್ತೈದು ಸುಂಕದ ಕಟ್ಟೆಗಳನ್ನು ದಾಟಿದಾಗ ಅಣ್ಣನ ಮೂಟೆ ಖಾಲಿಯಾಯಿತು. ಈಗ ತಮ್ಮ ತನ್ನ ಒಂದು ಮೂಟೆಗಾಗಿ ಮುಂದಿನ ಪ್ರತಿ ಸುಂಕದ ಕಟ್ಟೆಯಲ್ಲಿ ಒಂದೊಂದು ತೆಂಗಿನಕಾಯಿಯನ್ನು ಕೊಡುತ್ತಬಂದನು. ಹೀಗೆ ಇಪ್ಪತ್ತೈದು ಸುಂಕದ ಕಟ್ಟೆಗಳನ್ನು ಇವರು ದಾಟಿದಾಗ ತಮ್ಮನ ಮೂಟೆಯಲ್ಲಿ ಇಪ್ಪತ್ತೈದು ತೆಂಗಿನ ಕಾಯಿ ಉಳಿದಿತ್ತು.

2. ಒಬ್ಬ ತಂದೆಗೆ ಇಬ್ಬರು ಮಕ್ಕಳು. ತಂದೆ ತನ್ನ ಹಿರಿಯ ಮಗನಿಗೆ 5 ರೂ, ಕಿರಿಯನಿಗೆ 100 ರೂ, ಕೊಟ್ಟು ಸಂತೆಗೆ ಕಳಿಸುತ್ತಾನೆ. ಹಿರಿಯ ಮಗನು 5 ರೂಪಾಯಿಗೆ 5 ಕೊಳಗ ಮೆಣಸಿನ ಕಾಳನ್ನು ಕಿರಿಯನು 100 ರೂಪಾಯಿಗೆ 10 ಕೊಳಗ ಮೆಣಸಿನ ಕಾಳನ್ನು,

ತಂದು, ಒಂದೇ ಬೆಲೆಗೆ ಆ ಕಾಳನ್ನು ಮಾರಿದರು. ಮಾರಾಟವಾದ ಮೇಲೆ ಇಬ್ಬರೂ ತಮ್ಮ ತಂದೆಯ ಸಾಲ ತೀರಿಸುತ್ತಾರೆ. ಆಗ ಇಬ್ಬರ ಹತ್ತಿರವೂ ಅಷ್ಟಷ್ಟೇ ಹಣ ಉಳಿಯಿತು. ಹಾಗಾದರೆ ಮಾರಿದ ಬೆಲೆ ಯಾವುದು?

ಉತ್ತರ : ಕೊಳಗಕ್ಕೆ 19 ರೂ.

ಪ್ರತಿಯೊಬ್ಬರಲ್ಲಿ ಉಳಿದ ಹಣ 90 ರೂ.
ವಿವರ : 19*5=95 ರೂ. ಸಾಲದ ಹಣ 5 ರೂ. ಉಳಿದದ್ದು 90 ರೂ. 19*10=195 ರೂ. ಸಾಲದ ಹಣ 100 ರೂ. ಉಳಿದದ್ದು 90 ರೂ.

೧.೯. ದಿಕ್ಕು ಕೆಡಿಸುವ ಸಂಖ್ಯೆ

1. ಕಬ್ಬಿನ ಗದ್ದೆಯಲ್ಲಿ ಎಷ್ಟೋ ಗಿಳಿಗಳಿದ್ದವು. ಗಿಳಿಗಳು ಹಾರಿಬಂದು ಒಂದೊಂದು ಕಬ್ಬಿನ ಮೇಲೆ ಕುಳಿತವು. ಕೊನೆಗೆ ಹಾರಿಬಂದ ಗಿಳಿಗೆ ಕಬ್ಬು ಸಿಗಲಿಲ್ಲ. ಆದ್ದರಿಂದ ಗಿಳಿಗಳು ಪ್ರತಿ ಕಬ್ಬಿನ ಮೇಲೆ ಎರಡೆರಡರಂತೆ ಗಿಳಿಗಳು ಕುಳಿತವು. ಆಗ ಒಂದು ಕಬ್ಬು ಹೆಚ್ಚಾಯಿತು. ಬಂದ ಗಿಳಿಗಳೆಷ್ಟು? ಇದ್ದ ಕಬ್ಬುಗಳೆಷ್ಟು?

   ಉತ್ತರ : 3 ಕಬ್ಬು ಮತ್ತು 4 ಗಿಳಿಗಳು.

2. ಒಂದು ಅನ್ನ ಸಂತರ್ಪಣೆಗೆ ಎಷ್ಟೋ ಜನ ಬಂದಿದ್ದರು, ಅವರಲ್ಲಿ ಪ್ರತಿಯೊಬ್ಬರಿಗೆ ಒಂದೊಂದು ಬಾಳೆಎಲೆ ಹಾಕಿದರು. ಆದರೆ ಒಂದು ಬಾಳೆಎಲೆ ಕಡಿಮೆ ಯಾಯಿತು. ಆಗ ಆ ಬಾಳೆಎಲೆಗಳನ್ನು ಸಿಗಿದಾಗ ಒಂದು ಸೀಳು ಹೆಚ್ಚಾಯಿತು. ಹಾಗಾದರೆ ಅಲ್ಲಿರುವ ಜನರೆಷ್ಟು? ಬಾಳೆಎಲೆ ಎಷ್ಟು?

ಉತ್ತರ : 2 ಬಾಳೆಎಲೆ ಮತ್ತು 3 ಜನರು.

3. ಎರಡು ಟೊಂಗೆಗಳ ಮೇಲೆ ಗಿಳಿಗಳಿವೆ. ಮೇಲಿನ ಟೊಂಗೆಯಲ್ಲಿದ್ದ

ಒಂದು ಗಿಳಿ ಕೆಳಗಿನ ಟೊಂಗೆಗೆ ಬಂದರೆ ಎರಡು ಟೊಂಗೆಗಳಲ್ಲಿ ಇದ್ದ ಗಿಳಿಗಳ ಸಂಖ್ಯೆ ಸಮವಾಗುತ್ತದೆ. ಕೆಳಗಿನ ಟೊಂಗೆಯಲ್ಲಿದ್ದ ಗಿಳಿಗಳ ಎರಡುಪಟ್ಟು ಮೇಲಿನ ಟೊಂಗೆಯಲ್ಲಿ ಆಗುತ್ತದೆ. ಹಾಗಾದರೆ ಕೆಳಗೆ ಎಷ್ಟು ಗಿಳಿಗಳಿವೆ? ಮೇಲೆ ಎಷ್ಟು ಗಿಳಿಗಳಿವೆ?

ಉತ್ತರ : ಮೇಲೆ 7 ಮತ್ತು ಕೆಳಗೆ 5.

ವಿವರಣೆ: ಕೆಳಗಿನ ಟೊಂಗೆಯಿಂದ ಒಂದು ಗಿಳಿ ಮೇಲೆ ಹೋದರೆ ಕೆಳಗೆ 4, ಮೇಲೆ 8 ಆಗುತ್ತದೆ. ಮೇಲಿನ ಟೊಂಗೆಯಿಂದ ಒಂದು ಗಿಳಿ ಕೆಳಗೆ ಬಂದರೆ ಎರಡು ಟೊಂಗೆಯ ಮೇಲೆ 6–6 ಗಿಳಿಗಳಾಗುತ್ತವೆ.

4. 90 ಕುದುರೆಗಳನ್ನು 9 ಗುಟ್ಟಕ್ಕೆ ಮಿಗಿಲು ಸಂಖ್ಯೆಯಲ್ಲಿ ಕಟ್ಟಿರಿ.

ಉತ್ತರ: ಪ್ರತಿ ಗುಟ್ಟಕ್ಕೆ 10 ಕುದುರೆ ಕಟ್ಟಿರಿ. ಕಟ್ಟಿದ್ದ ಗುಟ್ಟ ಕೂಡಿಸಿದರೆ 11 ಮಿಗಿಲು ಸಂಖ್ಯೆ ಆಯಿತು.

೧.೧೦. ಜನಪದ ಅಂಕ ಗಣಿತ

1. ಒಂದು ಕಾರಖಾನೆಯಲ್ಲಿ ಹತ್ತು ಮಿಷನುಗಳಿವೆ. ಈ ಎಲ್ಲಾ ಮಿಷನುಗಳು ಪ್ರತಿಯೊಂದು ಸೆಕೆಂಡಿಗೆ 5 ಗ್ರಾಂ ತೂಕದ ಒಂದೊಂದು ಕಬ್ಬಿಣದ ಗುಂಡನ್ನು ಹೊರಕ್ಕೆ ಹಾಕುತ್ತವೆ. ಅದರಲ್ಲಿ ಒಂದು ಮಿಷನು ಮಾತ್ರ ಸೆಕೆಂಡಿಗೆ 4 ಗ್ರಾಂ ತೂಕದ ಗುಂಡುಗಳನ್ನು ಹೊರಗೆ ಹಾಕುತ್ತದೆ. ಇದನ್ನು ಪತ್ತೆಮಾಡಲು ಪ್ರತಿಯೊಂದು ಮಿಷನಿನ ನಿರ್ದಿಷ್ಟ ಸಂಖ್ಯೆಯ ಗುಂಡುಗಳನ್ನು ಕೂಡಿಸಿ ಒಂದೇಸಲ ತೂಕಮಾಡಿ ಕಡಿಮೆ ತೂಕದ ಗುಂಡನ್ನು ಉಗುಳುವ ಮಷಿನನ್ನು ಕಂಡುಹಿಡಿಯಲಾಯಿತು. ಹೇಗೆ?

ವಿವರಣೆ: ಒಂದನೇ ಮಷಿನಿನಿಂದ ಒಂದುಗುಂಡು, ಎರಡನೇ ಮಷಿನಿನಿಂದ ಎರಡುಗುಂಡು, ಮೂರನೇ ಮಷಿನಿನಿಂದ

ಮೂರುಗುಂಡು ಹೀಗೆ ಆಯಾ ನಂಬರಿನ ಮಷಿನಿನ ಸಂಖ್ಯೆಯಷ್ಟು ಗುಂಡುಗಳನ್ನು ಅನುಕ್ರಮವಾಗಿ ಸೇರಿಸಿಕೊಂಡು ತೂಗಲಾಯಿತು. ಆಗ ನಿರ್ದಿಷ್ಠ ಸಂಖ್ಯೆಯ ಗ್ರಾಂ ಗಳಷ್ಟು ತೂಕ ಕಡಿಮೆ ಆಯಿತು.

ಉದಾ: 9ನೇ ಮಷಿನ್ ಹಾಳಾಗಿದ್ದರೆ 9 ಗ್ರಾಂ, 3ನೇ ಮಷಿನ್ ಹಾಳಾಗಿದ್ದರೆ 3ಗ್ರಾಂ, ಕಡಿಮೆಯಾಗುತ್ತದೆ. ಹೀಗೆ ಯಾವ ನಂಬರಿನ ಮಷಿನ್ ಹಾಳಾಗಿದೆಯೋ ಅಷ್ಟು ಸಂಖ್ಯೆಯ ಗ್ರಾಂ ಕಡಿಮೆ ಬರುತ್ತದೆ.

2. ನಂದೊಂದು ನಿಂದೊಂದು, ನನ್ನ ಅರ್ಧ ಒಂದು, ನಿನ್ನ ಗಿರ್ಧ ಒಂದು, ಇನ್ನೊಂದು ಒಟ್ಟು ನೂರು ಹೇಗೆ?

ಉತ್ತರ: ನೂರು.

ವಿಧಾನ: 36+36+18+9+1=100

3. ಒಂದು ಮರ. ಅಲ್ಲಿ ಕೆಲವು ಹಕ್ಕಿಗಳು ಕುಳಿತವು. ಕೆಲವು ಹಾರಿದವು. ಹಾರಿದಷ್ಟೇ ಹಕ್ಕಿಗಳು ಮತ್ತೆ ಬಂದು ಕುಳಿತವು. ಮತ್ತೊಂದು ಮರದಿಂದ ಹಾರಿಹೋದ ಹಕ್ಕಿಗಳ ಅರ್ಧದಷ್ಟು ಹಕ್ಕಿಗಳು ಬಂದು ಕುಳಿತವು. ಮತ್ತೆ ಹಾರಿದ ಹಕ್ಕಿಗಳ 1/4 ಭಾಗ ಹಕ್ಕಿಗಳು ಬಂದು ಕುಳಿತವು. ಈಗ ಮರದ ಮೇಲೆ 99 ಹಕ್ಕಿಗಳಾದವು ಹೇಗೆ ?

ಉತ್ತರ: 36, 36, 18, 9.

ಗಮನಿಸಿ: ಇದು ಮೇಲಿನ ಗಣಿತವಾಗಿದ್ದರೂ ಹೇಳುವ ರೀತಿಯಲ್ಲಿ ಬದಲಾವಣೆಯಿದೆ.

4. ಅಪ್ಪ ತನ್ನ ಮಕ್ಕಳಿಗೆ ಒಂದು ರೂಪಾಯಿ ಕೊಟ್ಟು ಅಣ್ಣನಿಗೆ ತಮ್ಮನಿಗಿಂತ ಒಂದಾಣೆ ಹೆಚ್ಚಾಗುವಂತೆ ಇಬ್ಬರು ಹಂಚಿಕೊಳ್ಳಿರಿ ಎಂದನು. ಹಾಗಾದರೆ ಅವರ ಪಾಲಿಗೆ ಬಂದ ಹಣ ಎಷ್ಟು?

ಉತ್ತರ: 8 1/2 ಆಣೆ, 7 1/2 ಆಣೆ.

5. ಒಂದು ಸರದಲ್ಲಿ ಇದ್ದ ಮಣಿಗಳಷ್ಟೇ ಸರಗಳನ್ನು 361 ಮಣಿಗಳಿಂದ ತಯಾರಿಸಿರಿ.

ಉತ್ತರ: 19. ವಿವರಣೆ: ಅಂಕಗಣಿತದ ವರ್ಗಮೂಲ ರೀತಿ.

6. 121 ಕಬ್ಬುಗಳನ್ನು 11 ಜನರಿಗೆ ಅಷ್ಟಷ್ಟೇ ಬರುವಂತೆ ಹಂಚಿರಿ.

ಉತ್ತರ: 11. ವಿವರಣೆ: ಅಂಕಗಣಿತದ ವರ್ಗಮೂಲ ರೀತಿ.

೨. ಶಬ್ದಾತ್ಮಕ

೨.೧. ಶಬ್ದ ಚಮತ್ಕಾರ

1. ರಾಮನ ತಾಯಿಗೆ ಎರಡು ಜನ ಮಕ್ಕಳು ಒಬ್ಬನ ಹೆಸರು ನಾರಾಯಣ, ಇನ್ನೊಬ್ಬನ ಹೆಸರು ಏನು?

ಉತ್ತರ : ರಾಮ.

2. ಅಂದು ಅಮಾವಾಸ್ಯೆ, ಅದರಲ್ಲೂ ರವಿವಾರ. ನಾನು ನನ್ನ ಗೆಳೆಯ ದೀಪವಿಲ್ಲದ ಸೈಕಲ್ ಮೇಲೆ ಸಿನೇಮಾಕ್ಕೆ ಹೋದೆವು. ಆದರೆ ನಮ್ಮನ್ನು ಪೋಲಿಸನು ಹಿಡಿಯಲಿಲ್ಲ. ನಾವು ಸೈಕಲ್ ಹೊಡೆದುಕೊಂಡು ಸುರಕ್ಷಿತವಾಗಿ ಮನೆಗೆ ಬಂದೆವು. ಹೇಗೆ?

ಉತ್ತರ : ಸಿನೇಮಾಕ್ಕೆ ಹೋದದ್ದು ಹಗಲಿನಲ್ಲಿ.

3. ಒಂದು ಹುಂಜ ಉತ್ತರ ದಿಕ್ಕಿಗೆ ಮುಖಮಾಡಿ ಮೊಟ್ಟೆ ಹಾಕಿತು. ಅಣ್ಣ ಎರಡು ಮೈಲು ದೂರದಿಂದ, ತಮ್ಮ ಒಂದು ಮೈಲು ದೂರದಿಂದ ಓಡುತ್ತಾರೆ. ತಮ್ಮನು ಅಣ್ಣನಿಗಿಂತ ಎರಡು ಪಟ್ಟು ಹೆಚ್ಚು ವೇಗದಲ್ಲಿ ಓಡುತ್ತಾನೆ. ಹಾಗಾದರೆ ಮೊಟ್ಟೆ ಯಾರಿಗೆ ಸಿಗುತ್ತದೆ?

ಉತ್ತರ : ಹುಂಜವು ಮೊಟ್ಟೆ ಹಾಕುತ್ತದೆಯೇ?

4. ವಿದ್ಯುತ್ ರೈಲು ಉತ್ತರ ದಿಕ್ಕಿಗೆ ಓಡುತ್ತದೆ. ಅದರ ಹೊಗೆ ಯಾವ ದಿಕ್ಕಿಗೆ ಹೋಗುತ್ತದೆ?

ಉತ್ತರ : ಅದಕ್ಕೆ ಹೊಗೆ ಇದೆಯೇ?

5. ಬಿಳಿ ಆಕಳು ಬಿಳಿ ಹಾಲು ಕೊಡುತ್ತದೆ. ಕರಿ ಆಕಳು?

ಉತ್ತರ : ಬಿಳಿಹಾಲು.

6. ಮಾತು ಬರದವನು ತನಗೆ ನೀರಡಿಕೆಯಾಗಿದೆಯೆಂದು ಸನ್ನೆಯ ಮೂಲಕ ಹೇಳುತ್ತಾನೆ. ಆದರೆ ಕುರುಡ ಹೇಗೆ ಹೇಳುತ್ತಾನೆ?

ಉತ್ತರ : ಬಾಯಿಯಿಂದ.

7. ಬಸವನ ಅಪ್ಪನಿಗೆ ಮೂರು ಜನ ಮಕ್ಕಳು ಒಬ್ಬನ ಹೆಸರು ಕಾಲ್‌ಕಿಲೋ, ಇನ್ನೊಬ್ಬನ ಹೆಸರು ಅರ್ಧಾಕಿಲೋ, ಹಾಗಾದರೆ ಮತ್ತೊಬ್ಬನ ಹೆಸರೇನು?

ಉತ್ತರ : ಬಸವ.

8. ನೀರ ಮೇಲಿಂದ 7 ಕಾಗೆ, ಗಿಡದ ಮೇಲೆ ಹತ್ತು ಕಾಗೆ, ಬಿಸಿಲಲ್ಲಿ ಆರು ಕಾಗೆ, ಒಟ್ಟು ಎಷ್ಟು ಕಾಗೆ?

ಉತ್ತರ : 1 ಕಾಗೆ.

9. ಒಂದು ತೆಂಗಿನ ಕಾಯಿಗೆ ಪಾವ್ಲಿ ಕಮ್ಮಿ ನಾಲ್ಕಾಣೆ ಹಾಗಾದರೆ 2 ತೆಂಗಿನ ಕಾಯಿಗೆ ಎಷ್ಟು ಹಣ?

ಉತ್ತರ: ಏನು ಇಲ್ಲಾ.

10 ಸೆವೆಂಟಿಯನ್ನು ಸೆವೆನ್ ಜನರಿಗೆ ಸರಿಯಾಗಿ ಹಂಚಿರಿ.

ಉತ್ತರ: ಒಬ್ಬರಿಗೆ ಒಂದು ಟಿ.

11 ಒಬ್ಬಳು ಹಿಟ್ಟು ತೆಗೆದುಕೊಂಡು ಗುಡ್ಡಕ್ಕೆ ಹೋಗುತ್ತಾಳೆ. ಗುಡ್ಡದಲ್ಲಿ ಗಿರಣಿ ಇಲ್ಲ. ಮನೆಗೆ ಬಂದು ಚಪಾತಿ ಮಾಡಿತ್ತಾಳೆ ಹೇಗೆ? –

ಉತ್ತರ: ಅವಳು ಒಯ್ದುದ್ದು ಹಿಟ್ಟು; ಗೋದಿಯಲ್ಲ.

12 ಬೆಂಗಳೂರಿನಿಂದ ದಿಲ್ಲಿಗೆ ವಿಮಾನ ಹೊರಡುತ್ತದೆ. ಬೆಂಗಳೂರಿನಲ್ಲಿ 100ಟನ್ ಭಾರವಿದ್ದ ವಿಮಾನ ದಿಲ್ಲಿಗೆ ಬಂದಾಗ ಯಾರೂ ಕೆಳಗಿಳಿಯದಿದ್ದರೂ 90ಟನ್ ತೂಗುತ್ತದೆ ಹೇಗೆ?

ಉತ್ತರ: 10ಟನ್ ಪೆಟ್ರೋಲ್ ಖರ್ಚಾಗಿದೆ.

೨.೨. ಬೌದ್ಧಿಕ ಚಮತ್ಕಾರ

1. ಮಣಿಗಾರ, ಮಣಿಗಾರನ ತಂಗಿಯು. ಶಾನುಭೋಗ, ಶಾನುಭೋಗನ ಹೆಂಡತಿ. ಮೂರು ರೊಟ್ಟಿಗಳನ್ನು ಮುರಿಯದೇ ತಿನ್ನಬೇಕು. ಪ್ರತಿಯೊಬ್ಬರಿಗೂ ಒಂದೊಂದು ರೊಟ್ಟಿ ಬರಬೇಕು. ಹೇಗೆ ಹಂಚುವಿರಿ?

ವಿವರಣೆ : ಮಣಿಗಾರನ ತಂಗಿ ಶಾನುಭೋಗನ ಹೆಂಡತಿ. ಆದ್ದರಿಂದ ಅಲ್ಲಿದ್ದವರು ಮೂವರು ಮಾತ್ರ. ಇರುವ ರೊಟ್ಟಿಗಳು ಕೂಡ ಮೂರು. ಹೀಗಾಗಿ ಒಬ್ಬೊಬ್ಬರಿಗೆ ಒಂದೂಂದು ರೊಟ್ಟಿ ದೊರೆಯುತ್ತದೆ.

2. ಮೂರು ದೋಸೆಯನ್ನು ಅಣ್ಣತಮ್ಮಂದಿರಿಬ್ಬರಲ್ಲಿ ಹರಿಯದೇ ಹಂಚಿರಿ.

ಉತ್ತರ : ಅಣ್ಣ ಇಬ್ಬರು ತಮ್ಮಂದಿರು.

3. ಗಂಡ ಹೆಂಡತಿ, ಅಣ್ಣ ತಂಗಿ ಇವರಿಗೆ ಮೂರು ರೊಟ್ಟಿಯನ್ನು ಮುರಿಯದೆ ಹಂಚಿರಿ.

ವಿವರಣೆ : ಈ ಗಣಿತದಲ್ಲಿ ಇರುವ ಜನರ ಸಂಖ್ಯೆ ಮೂರು, ಗಂಡ ಹೆಂಡತಿ ಹಾಗೂ ಗಂಡನ ತಂಗಿ ಇವರಿಗೆ ಆ ಮೂರು ರೊಟ್ಟಿಯನ್ನು ಮುರಿಯದೇ ಕೊಡುವುದು ಸಾಧ್ಯವಾಗುತ್ತದೆ.

ಉತ್ತರ : ಅಣ್ಣ ತಂಗಿ. ಅಣ್ಣನ ಹೆಂಡತಿ ಇವರು ಒಟ್ಟು ಮೂರು ಜನ. ಪ್ರತಿಯೊಬ್ಬರಿಗೆ ಒಂದೊಂದು ರೊಟ್ಟಿ.

4. ಒಂದು ದೋಣಿಯಲ್ಲಿ ರೈತ ಹಾಗೂ ಎಮ್ಮೆ ಇವೆ. ದೋಣಿಯಲ್ಲಿ ತುಸು ಭಾರ ಹೆಚ್ಚಾದರೂ ಅದು ಮುಳುಗುತ್ತದೆ. ಆದರೆ ಎಮ್ಮೆ ದೋಣಿಯಲ್ಲಿ ಕರುಹಾಕುತ್ತದೆ. ಆದರೂ ದೋಣಿ ಏಕೆ ಮುಳುಗುವುದಿಲ್ಲ?

ಉತ್ತರ : ಕರು ಹೊರಗೆ ಬಂದರೂ ಭಾರ ಅಷ್ಟೇ ಉಳಿದಿದೆ.

5. ಅಕ್ಬರನು ಬೀರಬಲ್ಲನ ಹತ್ತಿರ 3 ರಲ್ಲಿ 1 ಕಳೆದರೆ ಎಷ್ಟು? ಎಂದನಂತೆ. ಆಗ ಬೀರಬಲ್ಲನು ಮಣ್ಣು ಎಂದನಂತೆ. ಯಾಕೆ?

ಉತ್ತರ: ವರ್ಷದಲ್ಲಿ 3 ಕಾಲಗಳು ಇವುಗಳಲ್ಲಿ ಮಳೆಗಾಲವು ಕಳೆದು ಹೋದರೆ ನೀರಿಲ್ಲ, ಬೆಳೆಯಿಲ್ಲ ಬರಿ ಮಣ್ಣು.

6. 101ರಲ್ಲಿ ಒಂದನ್ನು ಕಳೆದು ಒಂದನ್ನು ಕೂಡಿಸಿದರೆ ಎಷ್ಟಾಯಿತು?

ಉತ್ತರ: 101

8. ಟೇಬಲ್ ಮೇಲೆ ನಾಲ್ಕು ನೊಣಗಳು ಕುಳಿತ್ತಿದ್ದವು. ಅಲ್ಲಿ ಚಹ ಹೀರುತ್ತಿರುವವನು ಒಂದು ನೊಣವನ್ನು ಹೊಡೆದು ಕೊಂದನು. ಟೇಬಲ್ ಮೇಲೆ ಎಷ್ಟು ನೊಣಗಳು ಉಳಿದವು.

ಉತ್ತರ: ಒಂದು ಸತ್ತ ನೊಣ ಉಳಿಯಿತು.

೨.೪ ಒಂದೇ ಉತ್ತರ

1. ಒಬ್ಬ ಅಪರಿಚಿತನು ಅಂಗಡಿಕಾರನ ಹತ್ತಿರ ದೊಡ್ಡಣ್ಣ ಶಾನುಭೋಗರ ಮನೆ ಯಾವುದು? ಎನ್ನುತ್ತಾನೆ. ಇನ್ನೊಬ್ಬ ಹುಣಸೆ ಹಣ್ಣು ಸೇರಿಗೆ ಎಷ್ಟು ಎಂದು ಕೇಳುತ್ತಾನೆ. ಈ ಎರಡು ಪ್ರಶ್ನೆಗೂ ಒಂದೇ ಉತ್ತರ ಅದು ಯಾವುದು?

ಉತ್ತರ : ನಾಕಾಣೆ

2. ಒಂದು ಹುಡುಗ ಚಂಡನ್ನು ಆಡುತ್ತಿದ್ದಾಗ ಚಂಡು ಮಳಿಗೆಯ ಮೇಲೆ ಬಿತ್ತು. ಅವನು ಪಕ್ಕದ ಮನೆಯ ಮಾಲಿಕನ ಹತ್ತಿರ ಚಂಡನ್ನು ತೆಗೆದುಕೊಡಿ ಎಂದು ಹೇಳಿದನು. ಅದೇ ಸಮಯಕ್ಕೆ ಮಾಲಿಕನ ಮಗ ಬಂದು ಕುದುರೆ ಹತ್ತುವುದನ್ನು ಕಲಿಸಬೇಕೆಂದು ಹೇಳಿದನು. ಆಗ ಮಾಲಿಕನು ಬಂದು ಇಬ್ಬರಿಗೂ ಒಂದೇ ಉತ್ತರ ಕೊಟ್ಟನು. ಆ ಉತ್ತರ ಯಾವುದು?

ಉತ್ತರ : ಹತ್ತು.

3. ಒಬ್ಬನು ಅರಸನ ಕೈಲಿ(ಹತ್ತಿರ) ಮಂತ್ರಿಯ ಕುದುರೆ ಎಲ್ಲಿಗೆ ಹೋಗಿದೆ ಎಂದು ಕೇಳಿದನು. ಆಗ ಒಬ್ಬ ವ್ಯಾಪಾರಿಯು ಬಂದು ನಿಮ್ಮ ತಕ್ಕಡಿ ಕೊಡಿ ಎಂದನು. ಆಗ ಅರಸನು ಅವರಿಬ್ಬರಿಗೂ ಒಂದೇ ಉತ್ತರ ಕೊಟ್ಟನು. ಅದು ಯಾವುದು?

ಉತ್ತರ : ದಂಡಿಗೆ ಹೋಗಿದೆ.

ವಿವರಣೆ : ಕುದುರೆ ಯುದ್ಧಕ್ಕಾಗಿ ದಂಡಿಗೆ ಹೋಗಿದೆ. ತಕ್ಕಡಿಯ ಆಧಾರದ ಭಾಗಕ್ಕೆ ದಂಡಿಗೆ ಎನ್ನುತ್ತಾರೆ.

4. ಒಬ್ಬನು ಅಂಗಡಿಗೆ ಬಂದು ಈ ಸಾಬೂನಿನ ಬೆಲೆ ಎಷ್ಟು ಎಂದು ಕೇಳಿದನು. ಆಗ ಮತ್ತೊಬ್ಬನು ನಮ್ಮನೆಯ ಎಮ್ಮೆಯನ್ನು ಕಂಡಿದ್ದಿಯಾ? ಎಂದು ಕೇಳಿದನು. ಆಗ ಅಂಗಡಿಯವನು ಇಬ್ಬರಿಗೂ ಒಂದೇ ಉತ್ತರ ಹೇಳುತ್ತಾನೆ. ಅದು ಏನು?

ಉತ್ತರ : ನಾಕಾಣೆ.

5. ಒಂದು ದೊಡ್ಡ ಕೆರೆ ಇದೆ. ಆ ಕೆರೆಯ ಮಧ್ಯದಲ್ಲಿ ಒಂದು ಎತ್ತರವಾದ ಕಂಬವಿದೆ. ಕೆರೆಯ ದಂಡೆಯ ಮೇಲೆ ಒಬ್ಬ ಮನುಷ್ಯ ಇದ್ದಾನೆ.

ಅವನಲ್ಲಿ ಬೇಕಾದಷ್ಟು ಉದ್ದವಾದ ಹಗ್ಗವಿದೆ. ಅವನು ಕೆರೆಯ ನಡುವೆ ಕಂಬವನ್ನು ನೀರಿಗಿಳಿಯದೆ ಹಗ್ಗದಿಂದ ಕಟ್ಟಲು ಬಯಸುತ್ತಾನೆ. ಅದು ಹೇಗೆ ಸಾಧ್ಯ?

ವಿಧಾನ: ಮೊದಲು ಹಗ್ಗವನ್ನು ಕೆರೆಯ ಸುತ್ತಲು ಇಡುತ್ತಾ ಹೋಗುತ್ತಾನೆ. ನಂತರ ಹಗ್ಗದ ಎರಡು ಕೊನೆಗಳನ್ನು ಸೇರಿಸಿ ಉರುಳು ಮಾಡುತ್ತಾನೆ. ಆ ಮೇಲೆ ಹಗ್ಗವನ್ನು ಗಟ್ಟಿಯಾಗಿ ಎಳೆಯುತ್ತಾ ಹೋದರೆ ಕಂಬವು ಹಗ್ಗದಿಂದ ಕಟ್ಟಲ್ಪಡುತ್ತದೆ.

6. ಒಬ್ಬನ ಹತ್ತಿರ 101 ಲಿಂಬೆಹಣ್ಣು ಇರುತ್ತದೆ. ಅದನ್ನು ಆಚೆ ದಡಕ್ಕೆ ದಾಟಿಸಬೇಕು. ಒಂದು ದೋಣಿಯಲ್ಲಿ 100 ಲಿಂಬೆಹಣ್ಣು ಮಾತ್ರ ಹಿಡಿಯುತ್ತದೆ. ಅಂದರೆ 101 ಲಿಂಬು ಹೇಗೆ ದಾಟಿಸಬೇಕು?

ಉತ್ತರ : ಅಂತರಾಳದಲ್ಲಿ ಒಂದು ಲಿಂಬೆಹಣ್ಣು ಹಾರಿಸಿ ಹುಟ್ಟು ಹಾಕಿ, ಹಾರಿಸಿದ ಲಿಂಬು ಕೆಳಗೆಬೀಳುತ್ತಲೆ ಅದನ್ನು ಮತ್ತೆ ಹಾರಿಸಿ ಮತ್ತೆ ಹುಟ್ಟು ಹಾಕಿಬೇಕು.

7. ಒಂದೂರಿನಲ್ಲಿ ಒಂದು ಬ್ರಿಜ್ಜು. ಅದನ್ನು ನಡೆದುಕೊಂಡು ದಾಟಲು 10 ನಿಮಿಷಬೇಕು. ಬ್ರಿಜ್ಜನ್ನು ದಾಟಲು ಬಯಸುವ ಪ್ರತಿಯೊಬ್ಬರೂ ಒಂದು ರೂಪಾಯಿ ಸುಂಕ ಕೊಡಬೇಕು. ಈ ಸುಂಕ ವಸೂಲಿಗಾಗಿ ಒಬ್ಬ ಕಾವಲುಗಾರನಿರುತ್ತಾನೆ. ಈಗ ಅವನಿಗೆ ವಿಚಿತ್ರ ನಿದ್ರೆ. ಅದೇನೆಂದರೆ ಇವನು ಐದು ನಿಮಿಷ ಕುಳಿತಲ್ಲಿಯೇ ನಿದ್ರಿಸಿದರೆ ಮತ್ತೆ ಐದು ನಿಮಿಷ ಎಚ್ಚರವಾಗಿರುತ್ತಾನೆ. ಅವನು ಎಚ್ಚರದಲ್ಲಿರುವಾಗ ಸುಂಕ ಕೊಡದೆ ಬ್ರಿಜ್ಜು ದಾಟುವವರನ್ನು ಖಂಡಿತವಾಗಿ ಹಿಂತಿರುಗಿಸಿ ಕಳಿಸಿಬಿಡುತ್ತಾನೆ.

ಹೀಗಿರುವಾಗ ಒಬ್ಬನು ಬರಿಗೈಯ್ಯಲ್ಲಿ ಬಂದು ಬ್ರಿಜ್ ದಾಟುವಲ್ಲಿ ಜಯ ಪಡೆಯುತ್ತಾನೆ. ಇದು ಹೇಗೆ ಸಾಧ್ಯವಾಯಿತು?

ಉತ್ತರ : ಆತನು ಕಾವಲುಗಾರ ನಿದ್ರಿಸುವ ವೇಳೆಗೆ ಬ್ರಿಜ್ ದಾಟಲು ಪ್ರಾರಂಭಿಸಿ ಬ್ರಿಜ್‌ನ ಅರ್ಧ ದಾರಿ ಕ್ರಮಿಸುತ್ತಾನೆ.
ಕಾವಲುಗಾರನಿಗೆ ಎಚ್ಚರವಾದ ಕೂಡಲೆ ತಿರುಗಿ ನಿಲ್ಲುತ್ತಾನೆ. ಆಗ ಕಾವಲುಗಾರ ಆತನನ್ನು ಮುಂದೆ ಬರಲು ಕೊಡದೆ ಹಿಂದಕ್ಕೆ ಕಳಿಸಿಕೊಡುತ್ತಾನೆ. ಈತ ನಿರ್ದಿಷ್ಟ ಸ್ಥಳಕ್ಕೆ ಹೋಗುತ್ತಾನೆ.

4. ರೇಖಾತ್ಮಕ

1. ಒಂಬತ್ತು ಕಡ್ಡಿಯಿಂದ ಇಂಗ್ಲೀಷಿನ ಹತ್ತನ್ನು ರಚಿಸಿರಿ.

ಉತ್ತರ: T E N.


2. ಎರಡು ಕಡ್ಡಿಯಿಂದ ಇಂಗ್ಲೀಷಿನ ಹನ್ನೊಂದು ರಚಿಸಿರಿ.

ಉತ್ತರ: 11.

3. ಐದು ಕಡ್ಡಿಯಿಂದ ಇಂಗ್ಲೀಷಿನ ಹತ್ತು ಈ ಸಂಖ್ಯೆ ರಚಿಸಿರಿ.


ಉತ್ತರ: 1 □

4 . ಈ ರೇಖಾ ಚಿತ್ರದಲ್ಲಿ 9 ಗುಂಡುಗಳನ್ನು 9 ಸಂದಿಯಲ್ಲಿ ಇಡಿರಿ. ಎರಡನೇಯ ಸಂದಿಯಲ್ಲಿ ಗುಂಡು ಇರಬಹುದು ಇಲ್ಲದಿರಬಹುದು ಮೂರನೆಯ ಸಂದಿಗೆ ನೇರ ನಡೆ ಇರಲಿ. ನೆನಪಿಡಿ ಹೊರಡುವಾಗ ಗುಂಡು ಇಲ್ಲದ ಸಂದಿಯಿಂದ ಹೊರಟು 3ನೇಯ ಸಂದಿಯಲ್ಲಿ ಗುಂಡುಗಳನ್ನು ಇಡಿರಿ.




ಗುಟ್ಟು : ಗುಂಡು ಇಡುವಾಗ ಹೊರಟ ಸಂದಿಗೆ ಗುಂಡು ಬರುವಂತೆ ಪ್ರತಿ ಬಾರಿ ಪ್ರಯತ್ನಿಸಬೇಕು.


ಉದಾ;




5 . ಈ ಚಿತ್ರವನ್ನು ಕೈ ಬಿಡದೆ ಒಂದೇ ಗೆರೆಯಿಂದ ರಚಿಸಿರಿ




ಉತ್ತರ:




6. ಈ ಚಿತ್ರವನ್ನು ಕೈಬಿಡದೆ ಒಂದೇ ಗೆರೆಯಿಂದ ರಚಿಸಿರಿ.






ಉತ್ತರ : ಒಂದರಿಂದ ಹೊರಟು ಎರಡಕ್ಕೆ ಹೋಗಿ ಕೆಳಗೆ ಮೂರಕ್ಕೆ ಬಂದು ಬಲಗಡೆಯಿಂದ ಮೇಲಕ್ಕೆ ಹೊರಟು ನಾಲ್ಕರಲ್ಲಿ ನಿಲ್ಲಿಸಬೇಕು.

7



ನಾಲ್ಕು ಕಡ್ಡಿಗಳಿವೆ. ಕಡ್ಡಿಗಳ ನಡುವೆ ಚಂಡಿದೆ. ಕಡ್ಡಿಗಳು ಚಂಡು ಜಾರದಂತೆ ಹಿಡಿದಿವೆ. ಎರಡು ಕಡ್ಡಿಗಳನ್ನು ಮಾತ್ರ ಚಲಿಸಿರಿ. ಮೇಲಿನ ಆಕೃತಿ ಉಳಿಸಿರಿ. ಚಂಡನ್ನು ಹೊರ ಬೀಳಿಸಿರಿ.



ಉತ್ತರ:

8. 1Xಇದಕ್ಕೆ ಇಂಗ್ಲೀಷಿನ ಒಂದು ಅಕ್ಷರ ಪಡೆದು ಇಂಗ್ಲೀಷಿನ ಆರು ಮಾಡಿರಿ.

ಉತ್ತರ: SIX

ಜನಪದ ಗಣಿತಗಳು ಜನಪದ ಒಗಟುಗಳ ಹಾಗೆ ಕ್ರಿಯಾತ್ಮಕ ಜನಪದದ ಒಂದು ಭಾಗವಾಗಿವೆ. ಆದರೆ ಇವು ಬರವಣಿಗೆಯಲಿದ್ದಾಗ ಮನರಂಜನೆ ಹಾಗೂ ಬುದ್ಧಿಗೆ ಕಸರತ್ತು ಕೊಡುವ ಸಾಹಿತ್ಯವಾಗಿ ಪರಿಣಮಿಸುತ್ತವೆ. ಆದರೆ ಈ ಗಣಿತಗಳ ಸತತ ಅಧ್ಯಯನ ಅನುಭವ ಮನನದಿಂದ ಓದುಗರಿಗೆ ಹಲವು ಬಗೆಯಲ್ಲಿ ನೂರಾರು ಗಣಿತಗಳನ್ನು ರಚಿಸುವದು ಸಾಧ್ಯವಾಗುತ್ತದೆ. ಸಂದರ್ಭ ಬಂದಾಗ ಅವಕಾಶ ಸಿಕ್ಕಾಗ ಎದುರಾಳಿಗೆ ಸವಾಲೆಸೆದು ಇವುಗಳನ್ನು ಕ್ರಿಯಾತ್ಮಕಗೊಳಿಸಬಹುದು. ಜನಪದ ಗಣಿತಗಳ ಓದಿನಿಂದ ಹಾಗೂ ಸವಾಲು ಜವಾಬುಗಳ ಕೂಟದಲ್ಲಿ ಪಾಲ್ಗೊಳ್ಳುವದರಿಂದ ಮಕ್ಕಳು ತಮ್ಮ ಶಾಲಾ ಗಣಿತದಲ್ಲಿಯೂ ಅಸಕ್ತಿ ತಾಳುತ್ತಾರೆ. ಪಾಲಕರು ತಮ್ಮ ಮಕ್ಕಳಿಗಾಗಿ; ತಮಗಾಗಿ ಜನಪದ ಗಣಿತದ ಪುಸ್ತಕಗಳನ್ನು ಕೊಂಡು ಓದುವುದಲ್ಲದೆ ತಮ್ಮ ಮಕ್ಕಳಿಗೆ ಇವುಗಳನ್ನು ಓದಲು ಪ್ರೋತ್ಸಾಹಿಸುವದರಿಂದ ಪ್ರಯೋಜನವಿದೆ.

ಜನಪದ ಗಣಿತ

ಮೌಖಿಕ ಪರಂಪರೆಯ ಜನಪದರು ಶಾಲೆಗಳಿಗೆ ಹೋಗಿ ಲೆಕ್ಕ, ಲೆಕ್ಕಾಚಾರ ಕಲಿತವರಲ್ಲ. ಸಂದರ್ಭಾನುಸಾರ ಬುದ್ಧಿ ಬಳಸಿ, ನೆನಪಿನ ಶಕ್ತಿಯಿಂದ, ವ್ಯವಹಾರಕ್ಕೆ ತಕ್ಕಷ್ಟು ಗಣಿತ ಜ್ಞಾನವನ್ನು ಸಂಪಾದಿಸಿಕೊಳ್ಳುತ್ತಾರೆ. ಅವರ ನೆನಪಿನ ಕೋಶದಲ್ಲಿ ಅಸಂಖ್ಯಾತ ಗಣಿತ ವಿಷಯಗಳಿವೆ. ಅವುಗಳಲ್ಲಿ ಬುದ್ಧಿವಂತಿಕೆಯ ಜೊತೆಗೆ ಮನೋರಂಜನೆಯೂ ಉಂಟು. ಅವುಗಳನ್ನು ಸಂಗ್ರಹಿಸುವುದು ಕಷ್ಟ. ಆದರೂ ಶ್ರೀಮತಿ ಶಾಂತಿನಾಯಕರು ಜನಪದದ ಪ್ರೀತಿಯಿಂದ ಶ್ರಮಪಟ್ಟು ಹಲವು ಗಣಿತ ಚಮತ್ಕಾರಗಳನ್ನು ಸಂಗ್ರಹಿಸಿ, ಸೂಕ್ತ ಕಂಡಂತೆ ವಿಭಾಗಿಸಿ, ಸೋದಾಹರಣವಾಗಿ ಉತ್ತರ ಸಹಿತ ವಿರಿಸಿದ್ದಾರೆ. ಜನಪದರ ಈ ಗಣಿತಜ್ಞಾನ ಶಿಷ್ಟಪದರಿಗೂ ಉಪಯೋಗವಾಗುತ್ತದೆ.

-ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪
E-mail : janapadaparishath@hotmail.com